## ಕರ್ನಾಟಕ ಸರ್ಕಾರ
## ಜಿಲ್ಲಾ ಪಂಚಾಯತ, ಬೆಳಗಾವಿ
## ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ (ದಕ್ಷಿಣ)

# ಬೆಳಗಾವಿ ಚಿತ್ತ ನೂರರತ್ತ

## ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ
## ದ್ವಿತೀಯ ಭಾಷೆ ಕನ್ನಡದಲ್ಲಿ ಕನಿಷ್ಠ (೨೮) ಅಂಕಗಳಿಸುವ ಮಾರ್ಗದರ್ಶಿ


**ಮಾರ್ಗದರ್ಶಕರು**

ಶ್ರೀ. ಎ. ಬಿ. ಪುಂಡಲೀಕ
ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ (ದ)

**ಶಿಕ್ಷಣಾಧಿಕಾರಿಗಳು**

ಶ್ರೀ. ಎಮ್.ಆರ್. ಆಲಾಸೆ,
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ (ದ)

ಶ್ರೀ. ವಾಯ್.ಎಮ್. ಶಿವಬಸಣ್ಣವರ
ಕನ್ನಡ ವಿಷಯ ಪರಿವೀಕ್ಷಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ (ದ)

**ಸಂಪನ್ಮೂಲ ವ್ಯಕ್ತಿಗಳು**

೧) ಶ್ರೀ. ಮೆಹಬೂಬ ಜಮಾದಾರ.
ಅಲ್-ಅಮೀನ್ ಪ್ರೌಢ ಶಾಲೆ, ಆಝಂ ನಗರ, ಬೆಳಗಾವಿ

೨) ಶ್ರೀ. ರಾಜೇಂದ್ರ ಅನಗೋಳ
ಕೆ.ಎಲ್.ಎಸ್. ಆಂಗ್ಲಮಾಧ್ಯಮ ಪ್ರೌಢಶಾಲೆ, ಟಿಳಕವಾಡಿ, ಬೆಳಗಾವಿ.

೩) ಶ್ರೀಮತಿ ಮಹಾನಂದಾ ಜಗಜಂಪಿ
ಡಿ.ಪಿ. ಆಂಗ್ಲಮಾಧ್ಯಮ ಪ್ರೌಢಶಾಲೆ, ಟಿಳಕವಾಡಿ ಬೆಳಗಾವಿ

೪) ಶ್ರೀಮತಿ ರೇಖಾ ತರನಳ್ಳಿ (ತುಬಚಿ)
ಸೇಂಟ್ ಜೋಸೆಫ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕ್ಯಾಂಪ್ ಬೆಳಗಾವಿ

೫) ಶ್ರೀಮತಿ ಶೈಲಾ ಮುಚ್ಚಂಡಿ
ಸೇಂಟ್ ಪಾಲ್ಸ್ ಆಂಗ್ಲಮಾಧ್ಯಮ ಪ್ರೌಢಶಾಲೆ, ಕ್ಯಾಂಪ್ ಬೆಳಗಾವಿ

೬) ಶ್ರೀಮತಿ ಜಯಾ ಅಲ್ಮೆಡಾ
ಸೆಂಟ್ ಝೇವಿಯರ್ಸ್ ಆಂಗ್ಲಮಾಧ್ಯಮ ಪ್ರೌಢಶಾಲೆ ಕ್ಯಾಂಪ್ ಬೆಳಗಾವಿ

## ಪ್ರತಿಯೊಂದು ಗದ್ಯ ಹಾಗೂ ಪದ್ಯಗಳ ಒಂದು ವಾಕ್ಯದಲ್ಲಿಯ ಉತ್ತರಗಳು.

### (ಗದ್ಯ೧)ಒಣಮರದ ಗಿಳಿ — ಲೇಖಕರು : ಅ. ರಾ. ಮಿತ್ರ.

೧) ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?
**ಉತ್ತರ** :ವಿಷ ಸವರಿದ ಬಾಣಗಳನ್ನು ಸಿದ್ಧ ಮಾಡಿ ಇಟ್ಟುಕೊಂಡಿರುತ್ತಿದ್ದನು.

೨) ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?
**ಉತ್ತರ** :ಜಿಂಕೆ ತಪ್ಪಿಸಿಕೊಂಡ ಕಾರಣ ಬೇಡ ಬಿಟ್ಟ ಬಾಣವು ಮರಕ್ಕೆ ತಗುಲಿತು.

೩) ವಿಷದ ಬಾಣವು ಮರಕ್ಕೆ ತಗುಲಿದ್ದರಿಂದ ಆದ ಪರಿಣಾಮವೇನು?
**ಉತ್ತರ** : ವಿಷದ ಬಾಣವು ಮರಕ್ಕೆ ತಗುಲಿದ್ದರಿಂದ ಮರವು ಒಣಗಿ ನಿಂತಿತು.

೪) ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ ?
**ಉತ್ತರ** :ಮರ ಒಣಗಿ ನಿಂತರೂ ಗಿಳಿ ಆ ಮರದಲ್ಲೇ ವಾಸ ಮಾಡುವುದನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು.

೫) ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ?
**ಉತ್ತರ** :ಗಿಳಿಯ ತತ್ವನಿಷ್ಠೆ ಹಾಗೂ ಪರಹಿತಾಕಾಂಕ್ಷಿ ಗುಣವನ್ನು ಇಂದ್ರನು ಮೆಚ್ಚಿಕೊಂಡನು.

೬) ತನಗಾದ ಸಂತೋಷವನ್ನು ಇಂದ್ರನು ಯಾವ ರೀತಿಯಲ್ಲಿ ಪ್ರಕಟಿಸಿದನು ?
**ಉತ್ತರ** :"ಏನಾದರೂ ವರವನ್ನು ಕೇಳು ಕೊಡುತ್ತೇನೆ" ಎಂದು ಹೇಳುವುದರ ಮೂಲಕ ತನಗಾದ ಸಂತೋಷವನ್ನು ಪ್ರಕಟಿಸಿದನು.

### (ಗದ್ಯ—೨) ಅಸಿ–ಮಸಿ–ಕೃಷಿ — ಲೇಖಕರು : ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ

೭) ದೇಶದ ಉದ್ಧಾರ ಯಾರು ಯಾರನ್ನು ಅವಲಂಭಿಸಿದೆ ಎಂದು ಲೇಖಕರು ಹೇಳಿದ್ದಾರೆ ?
**ಉತ್ತರ** : ದೇಶದ ಉದ್ಧಾರ ಸೈನಿಕರನ್ನು, ಸಾಹಿತಿಗಳನ್ನು ಹಾಗೂ ರೈತರನ್ನು ಅವಲಂಭಿಸಿದೆ ಎಂದು ಲೇಖಕರು ಹೇಳಿದ್ದಾರೆ

೮) ಅಸಿ–ಮಸಿ ಎಂದರೇನು ?
**ಉತ್ತರ** :ಅಸಿ ಎಂದರೆ ಯುದ್ಧ (ಸೈನಿಕ), ಮಸಿ ಎಂದರೆ ಸಾಹಿತ್ಯ.

೯) ಈ ನಾಡಿನ ಬೆನ್ನೆಲುಬು ಯಾರು ?
೧೦) **ಉತ್ತರ** :ಕೃಷಿಕ (ರೈತ) ಈ ನಾಡಿನ ಬೆನ್ನೆಲುಬು.

೧೧) ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ ?
**ಉತ್ತರ** : ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು "ರಂಗ ಜಂಗಮ" ಎಂದು ಖ್ಯಾತರಾಗಿದ್ದಾರೆ.

೧೨) ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ ?
**ಉತ್ತರ** : ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆಯು 'ಪಾಲ್ ಹ್ಯಾರಿಸ್' ಪ್ರಶಸ್ತಿ ನೀಡಿದೆ.

### (ಗದ್ಯ೩)ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ — ಲೇಖಕರು : ರಮೇಶಗೌಡ ಎಂ ಕೆ.

೧೩) ಪುಟ್ಟರಾಜರ ತಂದೆ ತಾಯಿಗಳ ಹೆಸರೇನು ?
**ಉತ್ತರ** : ಪುಟ್ಟರಾಜರ ತಂದೆ ರೇವಯ್ಯ ತಾಯಿ ಸಿದ್ದಮ್ಮ.

೧೪) ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿಇರುತ್ತದೆ ?
**ಉತ್ತರ** : ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಮನಸ್ಸನ್ನು ಓದುವ ಶಕ್ತಿ ಇರುತ್ತದೆ.

೧೫) ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?

**ಉತ್ತರ** : ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ "ತಮ್ಮ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ" ಬೇಡಿಕೊಂಡಳು.

೧೬) ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು ?

**ಉತ್ತರ** : ಪುಟ್ಟರಾಜರು ಕನ್ನಡ, ಹಿಂದಿ, ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು.

೧೭) ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ ?

**ಉತ್ತರ** :ಪುಟ್ಟರಾಜರು ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸುವುದಕ್ಕಾಗಿ ಖಾದಿ ಬಟ್ಟೆ ತೊಡಲು ನಿರ್ಧರಿಸಿದರು.

**(ಗದ್ಯ ೪)ಹಕ್ಕಿಗೂಡುಗಳ ನಿಗೂಢ ಜಗತ್ತು.** **ಲೇಖಕರು : ಕೆ. ಪುಟ್ಟಸ್ವಾಮಿ--ಕೃಪಾಕರ ಮತ್ತು ಸೇನಾನಿ**

೧೮) ಸಸ್ತನಿಗಳ ಆಶ್ರಯದಾಣಗಳು ಯಾವುವು ?

**ಉತ್ತರ** :ಗುಹೆ, ಪೊಟರೆ, ಗೂಡು, ಬಿಲದಂತ ಜಾಗಗಳು ಸಸ್ತನಿಗಳ ಆಶ್ರಯದಾಣಗಳು.

೧೯) ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ ?

**ಉತ್ತರ** : ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು 'ಸ್ಪರ್ಶ ಸಂಜೀವಿನಿಯ' ಪಾಠ ಹೇಳುತ್ತವೆ.

೨೦) ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?

**ಉತ್ತರ** : ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನ ಮತ್ತು ಚಾಕಚಕ್ಯತೆಯಿಂದ ಗೂಡು ನಿರ್ಮಿಸುವ ಕಲೆಯ ಸಮನ್ವಯತೆ ಇದೆ.

೨೧) ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು ?

**ಉತ್ತರ** :ಹಕ್ಕಿಯ ದೇಹಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ-ಬೇಟೆ ಸಂಬಂಧಗಳು ಅದರ ಸಾಮರ್ಥ್ಯಕ್ಕೆ ಮಿತಿಯೊಡ್ಡುತ್ತವೆ.

೨೨) ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು ?

**ಉತ್ತರ** : ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಗಾಲ್ಫ್ ಚೆಂಡು, ನೀಲಿ ಶೀಶೆಯ ಚೂರು, ಈರುಳ್ಳಿ ಸಿಪ್ಪೆ ಮತ್ತು ಸಣ್ಣ ಬೊಂಬೆಯೊಂದನ್ನು ತಂದು ಅಲಂಕರಿಸಿತ್ತು.

**(ಗದ್ಯ ೫)ಕಾಫಿ ಕಪ್ಪು** **ಲೇಖಕರು : ಗುರುರಾಜ ಕರ್ಜಗಿ.**

೨೩) ಹೆಡ್ ಮಾಸ್ತರರು ಸಂತೋಷಗೊಂಡದ್ದು ಏಕೆ ?

**ಉತ್ತರ** :ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಕಂಡು ಹೆಡ್ ಮಾಸ್ತರರು ಸಂತೋಷಗೊಂಡರು.

೨೪) ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು ?

**ಉತ್ತರ** : ವಿದ್ಯಾರ್ಥಿಗಳು ಕಾಫೀ ಕುಡಿಯಲು ಬೆಲೆ ಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

೨೫) ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು ?

**ಉತ್ತರ**:"ಉತ್ತಮವಾದುದನ್ನೇ ಪಡೆಯಬೇಕು ಎನ್ನುವ ಆಸೆ" ಜೀವನದ ತೊಂದರೆಗಳಿಗೆ ನಿಜವಾದ ಕಾರಣವಾಗಿದೆ.

೨೬) ಗುರುಗಳು ಹೇಳಿದಂತೆ ಕಾಫೀ ಮತ್ತು ಕಾಫೀಯ ಕಪ್ಪು ಯಾವುದರ ಪ್ರತೀಕಗಳು ?

**ಉತ್ತರ** : "ಕಾಫೀ ಎಂದರೆ ಜೀವನ ಇದ್ದಂತೆ. ಹಣ, ಅಂತಸ್ತು ಮತ್ತು ಅಧಿಕಾರ ಕಾಫೀಯ ಕಪ್ಪು ಇದ್ದ ಹಾಗೆ" ಎಂದು ಹೇಳಿದರು.

೨೭) ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು ?

**ಉತ್ತರ** : ಕಾಫೀ ಎನ್ನುವ ಜೀವನಕ್ಕಿಂತ ಬೆಳೆಬಾಳುವ ಕಪ್ಪಿಗೆ ಹೆಚ್ಚು ಮಹತ್ವ ಕೊಡುತ್ತೇವೆ. ಮತ್ತೊಬ್ಬರ ಕಪ್ಪನ್ನು ನೋಡಿ ಅಸೂಯೆ ಪಡುತ್ತೇವೆ. ಇದು ದುರ್ದೈವದ ಸಂಗತಿ ಎಂದು ಹೇಳಿದ್ದಾರೆ.

೨೮) ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ ಯಾವುದು ?

**ಉತ್ತರ** : ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆಯ ಹೆಸರು 'ಕರಣಾಳು ಬಾ ಬೆಳಕೆ'

**(ಗದ್ಯ ೭) ಟುಸ್ಸೋಡ್ ವ್ಯಾಕ್ಸದ ಮ್ಯೂಸಿಯಂ** **ಲೇಖಕರು : ಬಸವಪ್ರಭು ಪಾಟೀಲ.**

೨೯) ಲಂಡನನಲ್ಲಿರುವ ವ್ಯಾಕ್ಸ್ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಹೇಗೆ ಬಂತು ?
**ಉತ್ತರ** :ಮೇಡ್ಂ ಟುಸ್ಸೋಡ್ ವ್ಯಾಕ್ಸ್ ಗೊಂಬೆಗಳನ್ನು ಮೊದಲು ಮಾಡಿದ್ದರಿಂದ ಆ ಹೆಸರು ಬಂತು.

೩೦) ಲಂಡನನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುವು ?
**ಉತ್ತರ** :ಕೇಂಬ್ರಿಡ್ಜ್ ಹಾಗೂ ಆಕ್ಸ್‌ಫರ್ಡ ಪ್ರಸಿದ್ಧ ವಿಶ್ವವಿದ್ಯಾನಿಲಯಗಳು.

೩೧) ಲಂಡನ್ ವಿಶ್ವವಿದ್ಯಾಲಯದ ಮುಂದೆ ಗಾಂಧೀಜಿಯವರ ಪ್ರತಿಮೆ ಏಕೆ ಸ್ಥಾಪಿಸಲಾಗಿದೆ ?
**ಉತ್ತರ** :ಲಂಡನ್ ವಿಶ್ವವಿದ್ಯಾಲಯದಲ್ಲಿ ಗಾಂಧೀಜಿಯವರು ಓದಿದ್ದರಿಂದ ಅಲ್ಲಿ ಅವರ ಪ್ರತಿಮೆ ಸ್ಥಾಪಿಸಲಾಗಿದೆ.

೩೨) ಥೇಮ್ಸ್ ನದಿ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ ?
**ಉತ್ತರ** :ಮುಂಬಯಿಯ ಸಮುದ್ರ ದಂಡೆಗುಂಟ ಇರುವ ಮರೀನ್ ಡ್ರೈವ್‌ಗೆ ಹೋಲಿಸಿದ್ದಾರೆ.

೩೩) ಲಂಡನ್‌ನ ಭೂ ವಿಸ್ತೀರ್ಣ ಎಷ್ಟು ?
**ಉತ್ತರ** : ಲಂಡನ್‌ನ ಭೂ ವಿಸ್ತೀರ್ಣ 610 ಚ. ಮೈಲು

**(ಗದ್ಯ—೭)ನನ್ನ ಗೋಪಾಲ.** **ಲೇಖಕರು : ಕುವೆಂಪು.**

೩೪) ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?
**ಉತ್ತರ** :ಬೆಳಿಗ್ಗೆ ಬೇಗನೆ ಎದ್ದು ಸ್ನಾನ ಮಾಡಿ ದೇವರ ಪೂಜೆಗೆ ಹೂವುಗಳನ್ನು ಕೊಯ್ದು ತರುವುದು ಗೋಪಾಲನ ಕೆಲಸವಾಗಿತ್ತು.

೩೫) ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಹೇಗೆ ಕಾಣಿಸುತ್ತಿದ್ದವು ?
**ಉತ್ತರ** :ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣಿಸುತ್ತಿದ್ದವು.

೩೬) ಗೋಪಾಲನ ಗೆಳೆಯರ ಹೆಸರೇನು ?
**ಉತ್ತರ** :ಗೋಪಾಲನ ಗೆಳೆಯರ ಹೆಸರು ರಾಮು, ಕಿಟ್ಟಿ, ನಾಣಿ, ಹಾಗೂ ಮಾಧು.

೩೭) ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು ?
**ಉತ್ತರ** : ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಕಾಡಿನ ದಾರಿಯಲ್ಲಿ ಕತ್ತಲೆ ಇರುತ್ತಿದ್ದ ಕಾರಣ ಭಯಪಡುತ್ತಿದ್ದನು.

೩೮) ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ ?
**ಉತ್ತರ** :ಗೋಪಾಲನ ಗೆಳೆಯರೆಲ್ಲ ಬೆಲೆಬಾಳುವ ಬಟ್ಟೆಗಳನ್ನು ಹಾಕಿಕೊಂಡು ಬರುತ್ತಿದ್ದರು. ಅಲ್ಲದೆ ಇವನ ಬಟ್ಟೆ ಕಂಡು ಹಾಸ್ಯ ಮಾಡುತ್ತಿದ್ದರು.ಹೀಗಾಗಿ ಗೋಪಾಲನು ಹೊಸ ಪಂಚೆಯನ್ನು ಬಯಸಿದನು.

೩೯) ಬನದ ಗೋಪಾಲ ಯಾರು ? ಕಾಡಿನಲ್ಲಿ ಅವನ ಕೆಲಸವೇನು ?
**ಉತ್ತರ** :ಬನದ ಗೋಪಾಲ(ಭಗವಂತ) ಗೋಪಾಲನ ಅಣ್ಣ. ಇವನು ಯಾವಾಗಲೂ ದನ ಕಾಯುತ್ತಾ ಇರುತ್ತಾನೆ.

**(ಪದ್ಯ—೧) ಏಣಿ.** **ಕವಯಿತ್ರಿ : ಸುಕನ್ಯಾ ಮಾರುತಿ.**

೪೦) ಏಣಿ ಜನರಿಗೆ ಮಾಡಿದ ಉಪಕಾರವೇನು ?
**ಉತ್ತರ** : ಏಣಿ ಜನರನ್ನು ಮೇಲಕ್ಕೆ ಎತ್ತಿ ಹಿಡಿಯುವುದರ ಮೂಲಕ ಉಪಕಾರ ಮಾಡುತ್ತದೆ.

೪೧) ಕವಯಿತ್ರಿಯು ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ ?
**ಉತ್ತರ** :ಕಷ್ಟದಲ್ಲಿ ಸಿಲುಕಿದವರಿಗೆ 'ತ್ರಿಶಂಕು' ಎಂದು ಕರೆದಿದ್ದಾರೆ.

೪೨) ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ ?
**ಉತ್ತರ** : ಮೇಲೇರಿದವರು 'ಸಹಾಯ ಮಾಡಿದವರನ್ನು ಮರೆತು, ಕಷ್ಟದಲ್ಲಿ ಸಿಲುಕಿಕೊಂಡಾಗ ' ತ್ರಿಶಂಕುಗಳು ಆಗುತ್ತಾರೆ.

೪೩) ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು ?

**ಉತ್ತರ** :"ಅವರು ಹೇಗೆ ಇಳಿಯುತ್ತಾರೆಂದು ನಾನೂ ನೋಡುತ್ತೇನೆ" ಎಂದು ಏಣಿ, ಮೇಲೇರಿದವರಿಗೆ ಸವಾಲು ಹಾಕುತ್ತದೆ.

೪೪) ಏಣಿಗೆ ಬೀಳುವ ಭಯವಿಲ್ಲ ಏಕೆ ?

**ಉತ್ತರ** : ಏಣಿಯು ಆನೆಯ ಭಾರ ಹೊತ್ತ ಗಟ್ಟಿ ನೆಲದ ಮೇಲೆ ಕಾಲೂರಿದುದರಿಂದ ಬೀಳುವ ಭಯವಿಲ್ಲ.

**(ಪದ್ಯ೨)ಬೋಧಿವೃಕ್ಷದ ಹಾಡು** — **ಕವಿ : ಬಸವರಾಜ ಸಬರದ.**

೪೫) ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ ?

**ಉತ್ತರ** : ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯೆಂದು ಬಣ್ಣಿಸಿದ್ದಾರೆ.

೪೬) ಸಿದ್ಧಾರ್ಥ ಯಾರನ್ನು ಹಾಗೂ ಯಾವುದರ ಮೋಹವನ್ನು ತೊರೆದನು ?

**ಉತ್ತರ** : ಸಿದ್ಧಾರ್ಥ ಪತ್ನಿ, ಮಗ ಹಾಗೂ ಅರಮನೆಯ ಮೋಹವನ್ನು ತೊರೆದನು.

೪೭) ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದದ್ದು ಏನು ?

**ಉತ್ತರ** : ಕಾಡನ್ನು ಅಲೆದ ಸಿದ್ಧಾರ್ಥನಿಗೆ ನಾಡಿನಾರ್ಥ ಹೊಳೆಯಿತು.

೪೮) ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು ?

**ಉತ್ತರ** : ಸಿದ್ಧಾರ್ಥನು ಜನರ ಪ್ರೀತಿಯನ್ನು ಹುಡುಕುತ್ತ ಕಾಡಿನಿಂದ ನಾಡಿನತ್ತ ಹೊರಟನು.

೪೯) ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥ ಏನು?

**ಉತ್ತರ**:ಸಿದ್ಧಾರ್ಥನು"ತಪಸ್ಸಿಗಿಂತ ಜೀವ, ಪ್ರೀತಿ ದೊಡ್ಡದು"ಎಂಬ ಬದುಕಿನಲ್ಲಿನ ಗೂಡಾರ್ಥವನ್ನು ಕಂಡುಕೊಂಡನು.

೫೦) ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ ?

**ಉತ್ತರ** :'ಬುದ್ಧನ ಜೀವನವನ್ನು' ಕುರಿತು ತಿಳಿಸುತ್ತದೆ.

೫೧) ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು ?

**ಉತ್ತರ** :ಬದುಕಿನಲ್ಲಿ 'ಪ್ರೀತಿ ದೊಡ್ಡದು' ಎಂಬ ಸತ್ಯವನ್ನು ಅರಿತುಕೊಂಡನು.

**(ಪದ್ಯ3 )ಸವಿಚೈತ್ರ.** — **ಕವಿ : ಬಸವರಾಜ ಸಾದರ.**

೫೨) ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದುಯಾವಾಗ ?

**ಉತ್ತರ** :ಯುಗಾದಿ ಹಬ್ಬದ ದಿನ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.

೫೩) ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?

**ಉತ್ತರ** : ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಬಗೆಬಗೆಯ ಬಣ್ಣಗಳಿಂದ ಬರೆದ ಚಿತ್ರದ ಹಾಗೆ ಸಿಂಗಾರಗೊಳ್ಳುತ್ತಾಳೆ.

೫೪) ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ ?

**ಉತ್ತರ** : ಚೈತ್ರದಲ್ಲಿ ನೆಲಮುಗಿಲುಗಳ (ಪ್ರಾಣಿ-ಪಕ್ಷಿಗಳ) ವಾಲಗ ನಡೆದಿರುತ್ತದೆ.

೫೫) ಚೈತ್ರವು ಮಾಡುವ ಕೆಲಸವೇನು ?

**ಉತ್ತರ** :ಚೈತ್ರವು "ಪ್ರಕೃತಿ ಎಲ್ಲೆಲ್ಲೂ ಹಸಿರಿನಿಂದ ಕಂಗೊಳಿಸುವಂತೆ, ಒಣಗಿ ನಿಂತ ಮರವು ಚಿಗುರು ಹಣ್ಣು ಹೂಗಳಿಂದ ಕಂಗೊಳಿಸುವಂತೆ" ಮಾಡುತ್ತದೆ.

೫೬) ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?

**ಉತ್ತರ** :ಬೇವು ಬೆಲ್ಲ ಬೆರೆಸಿ ಹಂಚುವ ಸಂಪ್ರದಾಯವಿದೆ.

**(ಗದ್ಯ ೪) ಸದ್ದು ಮಾಡದಿರು.** **ಕವಿ : ಸಿ.ಪಿ.ಕೃಷ್ಣಕುಮಾರ.**

೫೭) ತಿಮಿರಕ್ಕೆ ವೈರಿ ಯಾವುದು ?
**ಉತ್ತರ** :ದೀಪ ತಿಮಿರಕ್ಕೆ ವೈರಿಯಾಗಿದೆ.
೫೮) ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ ?
**ಉತ್ತರ** :ರವಿಯ ಕಿರಣಗಳಿಗೆ 'ಇಬ್ಬನಿ ಮೌನವಾಗಿ ಕರಗಿ ನೀರಾಗುವುದರಿಂದ' ಇಬ್ಬನಿಗೆ ಹೋಲಿಸಿದ್ದಾರೆ
೫೯) ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ ?
**ಉತ್ತರ** :ಶಾಂತಿಯಲಿ ಬದುಕಿ ಕರ್ತವ್ಯವನ್ನು ಮುಗಿಸು ಎಂದು ಹೇಳಿದ್ದಾರೆ.

**(ಪದ್ಯ ೫.)ಗುರಿ.** **ಕವಿ : ಎಂ. ಗೋಪಾಲಕೃಷ್ಣ ಅಡಿಗ.**

೬೦) ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ ?
**ಉತ್ತರ** :ಕೀಳು ಆಸೆಗಳು, ಈಡೇರದ ಆಸೆಗಳನ್ನು ಇಟ್ಟುಕೊಳ್ಳಬಾರದು. ಅಂಥ ಆಸೆಗಳಿಂದ ಕಷ್ಟಗಳು ಬರುತ್ತವೆ. ಅಲ್ಲದೆ ನೆಮ್ಮದಿಯನ್ನು ಕಳೆದುಕೊಳ್ಳಬೇಕಾಗುತ್ತದೆ.ಆದ್ದರಿಂದ ಅಳಿಯಾಸೆಗಳ ಸುಳಿಗೆ ಸಿಲುಕಬಾರದು.
೬೧) ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ ?
**ಉತ್ತರ** :ಮಾನವನ ಜೀವನದಲ್ಲಿ ಒಂದು ಗುರಿ ಇದ್ದರೆ ಅವನ ದುಡಿಮೆಯ ಹೂವು ಫಲಿಸುವುದು.
೬೨) ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು ?
**ಉತ್ತರ** :ಹಿಡಿದ ಒಂದು ಒಳ್ಳೆಯ ದಾರಿಯಲ್ಲಿ ಕೊನೆಯವರೆಗೆ ನಡೆಯುವುದು ಪೌರುಷದ ಬಾಳ್ವೆಯಾಗಿದೆ.
೬೩) ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ ?
**ಉತ್ತರ** : ಹಗಲಿರುಳು ಒಂದು ಹೆಗ್ಗುರಿಗೆ ಹೋರಾಡಬೇಕೆಂದು ಹೇಳಿದ್ದಾರೆ.

**ಪದ್ಯ—6 ಮೂಡಲ್ ಕುಣಿಗಲ್ ಕೆರೆ.** **ಕವಿ : ಜನಪದ.**

೬೪) ಕುಣಿಗಲ್ ಕೆರೆ ಯಾವ ದಿಕ್ಕಿನಲ್ಲಿ ಇದೆ ?
**ಉತ್ತರ** :ಕುಣಿಗಲ್ ಕೆರೆ ಮೂಡಲ ದಿಕ್ಕಿನಲ್ಲಿ ಇದೆ.
೬೫) ಕುಣಿಗಲ್ ಕೆರೆಯ ವೈಭವವನ್ನು ಹೆಚ್ಚಿಸಿದ ಅಂಶಗಳಾವುವು ?
**ಉತ್ತರ** :ಅಲ್ಲಿ ಮೂಡಿ ಬರುವ ಚಂದಿರನ ಸೌಂದರ್ಯ ಮತ್ತು ಕೆರೆಯನ್ನು ಕಟ್ಟಿದ ತಾಂತ್ರಿಕತೆ ವೈಭವವನ್ನು ಹೆಚ್ಚಿಸಿವೆ.
೬೬) ಕುಣಿಗಲ್ ಕೆರೆಯ ಆಕಾರವನ್ನು ಯಾವ ಹಣ್ಣಿಗೆ ಹೋಲಿಸಲಾಗಿದೆ ?
**ಉತ್ತರ** :ಕುಣಿಗಲ್ ಕೆರೆಯ ಆಕಾರವನ್ನು ಬಾಳೆಯ ಹಣ್ಣಿಗೆ ಹೋಲಿಸಲಾಗಿದೆ.
೬೭) ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ ?
**ಉತ್ತರ** :ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆಯ ಹಣ್ಣಿಗೆ ಹೋಲಿಸಲಾಗಿದೆ.
೬೮) ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ ?
**ಉತ್ತರ** :ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವ ಬಂದನೆಂದು ಉತ್ಪ್ರೇಕ್ಷಿಸಲಾಗಿದೆ.

**(ಪದ್ಯ ೭) –– ವಚನಗಳು :** **ವಚನಕಾರರು : ಬಸವಣ್ಣ. ಸಿದ್ಧರಾಮ. ಅಕ್ಕಮಹಾದೇವಿ.**

೬೯) ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ ?
**ಉತ್ತರ** :ಬಸವಣ್ಣನವರು ಆ ಕಾಲದಲ್ಲಿದ್ದ ಧಾರ್ಮಿಕ ಮೂಢನಂಬಿಕೆಗಳನ್ನು ಖಂಡಿಸಿದ್ದಾರೆ.
೭೦) ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ ?
**ಉತ್ತರ** :"ವೇಷದಂತೆ ಆಚರಣೆ ಇರಬೇಕು, ವೇದಾಂತವನ್ನು ಓದಿದರೆ ಅದರಂತೆ ನಡೆದುಕೊಳ್ಳಬೇಕು. ಪುಣ್ಯ ತೀರ್ಥಗಳು ಬರವಂತಿದ್ದರೆ ನಾನಾ ಕೆರೆಗಳನ್ನು ತೋಡಬೇಕು" ಎಂದು ಹೇಳಿದ್ದಾರೆ.

೨೧) ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ ?

**ಉತ್ತರ** :ವೇದಾಂತವನ್ನು ಓದಿ ಅರ್ಥ ಮಾಡಿಕೊಂಡ ಮೇಲೆ ಬ್ರಹ್ಮನಂತೆ ಇರಬೇಕೆಂದು ಸಿದ್ಧರಾಮ ಹೇಳುತ್ತಾರೆ.

೨೨) ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ ?

**ಉತ್ತರ** :ಪುಣ್ಯ ತೀರ್ಥಗಳು ಬಾರದಿದ್ದರೆ ಫಲವಿಲ್ಲ. ಅಂಥಹ ಕೆರೆಗಳು ನಿಷ್ಪ್ರಯೋಜಕ ಎಂದು ಹೇಳಿದ್ದಾರೆ.

೨೩) ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?

**ಉತ್ತರ** :ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ.

೨೪) ಅಕ್ಕಮಹಾದೇವಿಯು ತನ್ನ ಬದುಕು ಯಾವಾಗ ಫಲದಾಯಕ ಆಗುತ್ತದೆಂದು ಹೇಳುತ್ತಾಳೆ ?

**ಉತ್ತರ** :'ಚೆನ್ನಮಲ್ಲಿಕಾರ್ಜುನನ ಜ್ಞಾನವಿದ್ದರೆ ತನ್ನ ಬದುಕು ಫಲದಾಯಕ ಆಗುತ್ತದೆ' ಎಂದು ಅಕ್ಕಮಹಾದೇವಿಯು ಹೇಳುತ್ತಾಳೆ.

**(ಪದ್ಯ ೮) -- ನೀಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ.** **ಕವಿ : ಕುಮಾರವ್ಯಾಸ.**

೨೫) ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?

**ಉತ್ತರ** :ಬಲದ ಸಮುದ್ರದಂತೆ, ಹಾಗೂ ಭೂಮಿಯೇ ಈ ಸೈನ್ಯಕ್ಕೆ ಜನ್ಮ ನೀಡಿದಂತೆ ಕಾಣಿಸಿತು.

೨೬) ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?

**ಉತ್ತರ** :ಕೌರವನ ಸಮುದ್ರದಂತಹ ಸೇನೆಯನ್ನು ಕಂಡು ಹೋರಾಡುವ ಧೈರ್ಯವಿಲ್ಲದೆ, ಹೆದರಿ ಓಡಿದನು.

೨೭) ಧುರ (ಯುದ್ಧ) ಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ?

**ಉತ್ತರ** :ಪಾಪ ಪ್ರಾಪ್ತಿಯಾಗುತ್ತದೆ.

೨೮) ಅರ್ಜುನನು ಯಾರನ್ನು ನಾಡನರಿ (ಊರಿನ ನರಿ) ಎಂದು ಕರೆದಿದ್ದಾನೆ ?

**ಉತ್ತರ** :ಅರ್ಜುನನು ಉತ್ತರಕುಮಾರನನ್ನು ನಾಡನರಿ (ಊರಿನ ನರಿ) ಎಂದು ಕರೆದಿದ್ದಾನೆ.

೨೯) ಉತ್ತರನಿಗೆ ಇಂದ್ರ ಪದವಿಯು ಏಕೆ ಬೇಕಿಲ್ಲ ?

**ಉತ್ತರ** :ಕೌರವ ಸೈನ್ಯದೊಡನೆ ಕಾದಾಡಿ, ಮಡಿದು ಇಂದ್ರನ ಪದವಿ ಪಡೆಯುವುದಕ್ಕಿಂತ, ಜೀವ ಉಳಿಸಿಕೊಂಡು ಬದುಕುವುದೇ ಒಳಿತು ಎನಿಸಿದ್ದರಿಂದ ಉತ್ತರನಿಗೆ ಇಂದ್ರನ ಪದವಿ ಬೇಕಾಗಿಲ್ಲ.

೩೦) ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ ?

**ಉತ್ತರ** :ಅರಮನೆಯ ನಾರಿಯರು ತುಂಬುತ್ತಾರೆ

## ಪ್ರತಿಯೊಂದು ಗದ್ಯ ಹಾಗೂ ಪದ್ಯಗಳ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಗಳು.

**(ಗದ್ಯ೧)ಒಣಮರದ ಗಿಳಿ** **ಲೇಖಕರು : ಅ. ರಾ. ಮಿತ್ರ.**

1) ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನಾಗಿತ್ತು ?

**ಉತ್ತರ** :"ಹಲವಾರು ವರ್ಷಗಳಿಂದ ಆಸರೆ, ಹಣ್ಣು ಕೊಟ್ಟು, ನೆರಳು ನೀಡಿದೆ. ಸುಖ ಸಂಪತ್ತಿನ ಕಾಲದಲ್ಲಿ ಜತೆಗಿದ್ದವರು, ದುರ್ಭರ ಗಳಿಗೆಯಲ್ಲಿ ಕೂಡ ಜೊತೆಗೆ ಇದ್ದು, ಉಪಕಾರ ಸ್ಮರಣೆ ಮಾಡಬೇಕು.ಅದಕ್ಕೆ ಒಳ್ಳೆಯ ದಿನ ಬರಲೆಂದು ಹಾರೈಸಬೇಕು" ಎಂದು ಸಮರ್ಥನೆ ನೀಡಿತು.

2) ಸಾಮಾನ್ಯವಾದ ಲೋಕವರ್ತನೆ ಯಾವುದು ?

**ಉತ್ತರ** :"ಸುಖ ಸಂಪತ್ತು ಇರುವಾಗ ಜೊತೆಯಲ್ಲಿರುವುದು. ದುರ್ಭರ ಗಳಿಗೆಯಲ್ಲಿ ಅವರಿಂದ ದೂರ ಸರಿಯುವುದು.

3) ಗಿಳಿಯು ಇಂದ್ರನನ್ನು ಯಾವ ವರ ಕೇಳಿತು ?

**ಉತ್ತರ** :"ಈ ಮರ ಮೊದಲಿನಂತೆ ಹಸಿರಿನಿಂದ, ಫಲಪುಷ್ಪಗಳಿಂದ ಕಂಗೊಳಿಸಬೇಕು. ಮೊದಲಿನ ಹಾಗೆ ನೆರಳು ಕೊಡುವಂತೆ ವರವನ್ನು ದಯಪಾಲಿಸು" ಎಂದು ಕೇಳಿತು.

**(ಗದ್ಯ—೨) ಅಸಿ–ಮಸಿ–ಕೃಷಿ** **ಲೇಖಕರು : ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ**

೧) ದೇಶದ ಅಭಿವೃದ್ಧಿ ಕುರಿತು ಜನರಾಡುವ ಮಾತುಗಳಾವುವು ?
**ಉತ್ತರ** : "ವೈಜ್ಞಾನಿಕ ಬೆಳವಣಿಗೆ ಆಣೆಕಟ್ಟುಗಳ ನಿರ್ಮಾಣ, ವಿದ್ಯುತ್ ಉತ್ಪಾದನೆಯೇ ಕಾರಣ ಎಂದು ಜನರು ಆಡುತ್ತಾರೆ.

೨) ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?
**ಉತ್ತರ** : ಸೈನಿಕರು ಪ್ರಬಲರಾಗಿದ್ದರೆ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನು ಹೊಡೆದು ಹಾಕುತ್ತದೆ.ಆದ್ದರಿಂದ ರಕ್ಷಣಾಪಡೆ ಪ್ರಬಲವಾಗಿರಬೇಕು.

೩) ಪೆನ್ನು ಖಡ್ಗಕ್ಕಿಂತ ಹರಿತವಾದುದು ಏಕೆ ?
**ಉತ್ತರ** : ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಒಂದು ಲೇಖನ, ಕತೆ, ಕವನ, ಕಾದಂಬರಿ ಹಲವರ ಬದುಕನ್ನು ಬದಲಿಸಬಲ್ಲುದು.ಒಂದು ಸರ್ಕಾರವನ್ನು ಉರುಳಿಸಿ, ಮತ್ತೊಂದು ಸರ್ಕಾರವನ್ನು ತರಬಹುದು.

೪) ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು ?
**ಉತ್ತರ** :ರೈತರುನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ.ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ರೋಗ ತಗಲುತ್ತಿದೆ.ಅದಲ್ಲದೆ ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆಯೂ ಸಿಗುತ್ತಿಲ್ಲ.

೫) ಕೃಷಿಕರು 'ಭೂಮಿಯನ್ನು ಉಳುವುದಿಲ್ಲ" ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು ?
**ಉತ್ತರ** :ರೈತನು ಭೂಮಿಯಲ್ಲಿ ಬೆಳೆಯುವ ಅಕ್ಕಿ, ರಾಗಿ ಟೊಮೆಟೊ ಹಾಗೂ ಇನ್ನಿತರ ಯಾವುದೇ ಆಹಾರ ಕಾರ್ಖಾನೆಗಳಿಂದತಯಾರಿಸಲು ಸಾಧ್ಯವಿಲ್ಲ. ಹೀಗಾಗಿ ಜೀವಿಸುವುದು ಕಷ್ಟವಾಗುತ್ತದೆ.ಆಹಾರವಿಲ್ಲದೆ ಬದುಕುವುದು ಅಸಾಧ್ಯವಾಗುತ್ತದೆ.

೬) ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು ?
**ಉತ್ತರ** :ಸರ್ವಜ್ಞ ಕವಿಯು ಕೃಷಿಯ ಬಗ್ಗೆ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು. ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೇ ಕೆಡಗುಂ" ಎಂದು ವಚನ ನುಡಿದಿದ್ದಾರೆ.

**(ಗದ್ಯ ೩)ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ** **ಲೇಖಕರು : ರಮೇಶಗೌಡ ಎಂ ಕೆ.**

೧) ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?
**ಉತ್ತರ** : ಪುಟ್ಟರಾಜರಿಗೆ ಕಣ್ಣಿನ ರೋಗ ಬಂದ ಕಾರಣ, ನಾಟಿವೈದ್ಯರು ಅವರ ಕಣ್ಣುಗುಡ್ಡೆಗೆ ನಾಯಿಯ ಮೈಯಲ್ಲಿರುವ ಹುಳು ಮುಟ್ಟಿಸಬೇಕು ಎಂದರು. ಆಗ ಕಣ್ಣಿಗೆ ಹುಳು ಮುಟ್ಟಿಸುವಾಗ ಹುಳು ಕೈ ಜಾರಿ ಕಣ್ಣಿನ ಒಳಗೆ ಬಿದ್ದುಬಿಟ್ಟವು.

೨) ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ ?
**ಉತ್ತರ** :ಪುಟ್ಟರಾಜರಲ್ಲಿದ್ದ ಚುರುಕುತನ ಮತ್ತು ಏಕಾಗ್ರತೆಯನ್ನು ನೋಡಿದ ಅವರ ಸೋದರಮಾವ ಚಂದ್ರಶೇಖರಯ್ಯನವರು ಪುಟ್ಟಯ್ಯರನ್ನು ಪಂಚಾಕ್ಷರಿ ಗವಾಯಿಗಳಿಗೆ ಒಪ್ಪಿಸಿದರು.

೩) ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಬಾಲಕ ಪುಟ್ಟಯ್ಯ ಯಾವ ಮನಸ್ಥಿತಿ ಹೊಂದಿದ್ದನು ?
**ಉತ್ತರ** : ಪುಟ್ಟಯ್ಯ "ನಾನು ಪಂಚಾಕ್ಷರಿ ಗುರುಗಳನ್ನು ಅನುಸರಿಸಬೇಕು. ಅವರ ನುಡಿಯೇ ನನಗೆ ಮಂತ್ರ.ಅವರ ನಡೆಯೇ ನನಗೆ ಆಚಾರವಾಗಬೇಕು" ಎಂಬ ಮನಸ್ಥಿತಿ ಹೊಂದಿದ್ದರು.

೪) ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು ?
**ಉತ್ತರ** :ಪುಟ್ಟರಾಜರು ಅಷ್ಟಾಧ್ಯಾಯಿ ಶರ್ಮಮರ್ಮರ 'ಕಾತಂತ್ರ', ಕೇಶಿರಾಜನ 'ಶಬ್ದಮಣಿ ದರ್ಪಣ', ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ದಾನುಶಾಸ್ತ್ರ, ಛಂದಶಾಸ್ತ್ರ ಹಾಗೂ ಕನ್ನಡ ವ್ಯಾಕರಣಗಳಲ್ಲಿ ನಿಷ್ಣಾತರಾದರು.

೫) ತಾಯಿ ಸಿದ್ಧಮ್ಮ ಪುಟ್ಟರಾಜನನ್ನು ಏನೆಂದು ಆಶೀರ್ವದಿಸಿದಳು ?
**ಉತ್ತರ** :ತಾಯಿ"ಸಂಸಾರವೆಂಬ ಬಂಧನದಲ್ಲಿ ಬಂಧಿಯಾಗುವುದು ನಿನಗಿಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ. ಮಗುವೆ ಗುರು ಪಂಚಾಕ್ಷರರು ತೋರುವ ಮಾರ್ಗದಲ್ಲಿ ನಡೆದು ನೀನು ಅಮರನಾಗು" ಎಂದು ಆಶೀರ್ವದಿಸಿದಳು.

೬) ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು ?
**ಉತ್ತರ** : "ಬಿಳಿಯ ಉದ್ದನೆಯ ಅಂಗಿ, ಪಂಚೆ, ತಲೆಯ ಮೇಲೆ ಅಂದವಾಗಿ ಸುತ್ತಿದ ಕಾವಿಬಣ್ಣದ ಪೇಠ, ಹಣೆಯಲ್ಲಿ ವಿಭೂತಿ, ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೈಯಲ್ಲೊಂದು ಊರುಗೋಲು".

೭) ಪುಟ್ಟರಾಜರಿಗೆ ದೊರೆತ ಗೌರವ ಪ್ರಶಸ್ತಿಗಳಾವುವು ?
**ಉತ್ತರ** : ಪುಟ್ಟರಾಜರಿಗೆ ನಾಡೋಜ ಪ್ರಶಸ್ತಿ, ಬಸವಶ್ರೀ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಗೌರವ ಡಾಕ್ಟರೇಟ್ ಪ್ರಶಸ್ತಿ ಹೀಗೆ ಮುಂತಾದ ಪ್ರಶಸ್ತಿಗಳು ದೊರೆತವು.

೮) ವಿಶೇಷ ಚೇತನರಿಗೆ ನೀವು ಯಾವ ಮಾತುಗಳಿಂದ ಧೈರ್ಯ ತುಂಬುವಿರಿ ?
**ಉತ್ತರ** : "ಉನ್ನತವಾದ ಗುರಿಯನ್ನು ಮುಟ್ಟಲು ಯಾವುದೇ ರೀತಿಯ ದೈಹಿಕ ನ್ಯೂನತೆಗಳು ಎಂದೂ ಅಡ್ಡಿಯಾಗಲಾರವು. ಸಕಾರಾತ್ಮಕ ಚಿಂತನೆಯಿಂದ ಗುರಿಯನ್ನು ಸಾಧಿಸಬೇಕು"

**(ಗದ್ಯ ೪)ಹಕ್ಕಿಗೂಡುಗಳ ನಿಗೂಢ ಜಗತ್ತು. ಲೇಖಕರು : ಕೆ. ಪುಟ್ಟಸ್ವಾಮಿ--ಕೃಪಾಕರ ಮತ್ತು ಸೇನಾನಿ**

೧) ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?
**ಉತ್ತರ** : ಹಕ್ಕಿಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವು, ಗುಟುಕು ಪಡೆದು ಜೀವ ಕಣ್ತೆರವ ಸೃಷ್ಟಿಯ ಅಚ್ಚರಿಯಿದೆ.ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ.ಈ ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ ಇದೆ.

೨) ಹಕ್ಕಿಗೂಡಿನ ವಿಶೇಷತೆಗಳೇನು ?
**ಉತ್ತರ** : ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಅವು ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲೂ ಭಿನ್ನವಾದ ವಸ್ತುವನ್ನು ಬಳಸಬಲ್ಲವು.ಒಳಗಡೆಯ ಗೋಡೆಯನ್ನು ಪ್ಲಾಸ್ಟರ್ ಮಾಡಬಲ್ಲ ಸೌಂದರಪ್ರಜ್ಞೆ ಅವುಗಳಿಗೆ ಇವೆ.

೩) ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ?
**ಉತ್ತರ** :ಹಕ್ಕಿಗಳು ತಮ್ಮ ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು, ಹವಾಮಾನ ವೈಪರೀತ್ಯವನ್ನು ಎದುರಿಸಲು, ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು, ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಗೂಡನ್ನು ನಿರ್ಮಿಸಿಕೊಳ್ಳುತ್ತವೆ.

೪) ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?
**ಉತ್ತರ** :ಸಾಗರದ ದ್ವೀಪ, ಗಿರಿ ಶಿಖರದ ನೆತ್ತಿ, ನಿಬಿಡ ವನಶ್ರೇಣಿ, ಕಗ್ಗತ್ತಲ ಕಣಿವೆ, ಶೀತಲ ಧ್ರುವಪ್ರದೇಶ ಹೀಗೆ ಹಕ್ಕಿಗಳು ತಮ್ಮ ಗೂಡನ್ನು ಎಲ್ಲೆಲ್ಲೂ ಕಟ್ಟಿಕೊಳ್ಳಬಲ್ಲವು.

೫) ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿ ಗೂಡು ಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ ?

**ಉತ್ತರ** :ಟ್ರಾನ್ಸ್‌ಫಾರ್ಮರ್ ಬಳಿ, ಮೀಟರ್ ಪೆಟ್ಟಿಗೆಯಲ್ಲಿ, ವಿದ್ಯುತ್ ತಂತಿಗಳಲ್ಲಿ ತಮ್ಮ ಗೂಡನ್ನು ಕಟ್ಟಿಕೊಳ್ಳುತ್ತವೆ

೬) ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ ?

**ಉತ್ತರ** : ಹಕ್ಕಿಗಳು ವರ್ಣಮಯ ಹೂ ದಳವನ್ನೋ ಅಥವಾ ಹೊಳೆವ ಕಲ್ಲುಗಳನ್ನೋ ಹೆಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚೂರುಗಳನ್ನು, ಬಟ್ಟೆಯ ಚಿಂದಿ ಹೀಗೆ ಮುಂತಾದವುಗಳಿಂದ ತಮ್ಮ ಗೂಡುಗಳನ್ನು ಅಲಂಕರಿಸುತ್ತವೆ.

೭) ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು ?

**ಉತ್ತರ** : ಇವು ಕೇವಲ ಎರಡು ಒಣ ಕಡ್ಡಿಯನ್ನು ಅಪ್ಪಿ ಹಿಡಿದಂತೆ ಬಟ್ಟಲಾಕಾರದಲ್ಲಿ ಗೂಡು ನಿರ್ಮಿಸುತ್ತವೆ. ಹೊರಮೈಗೆ ಜೇಡರ ಮೊಟ್ಟೆಗಳ ಕೋಶಗಳನ್ನು ನಿರ್ದಿಷ್ಟ ಅಂತರದಲ್ಲಿ ಜೋಡಿಸಿ ಅಲಂಕರಿಸುತ್ತವೆ.

**(ಗದ್ಯ ೫)ಕಾಫಿ ಕಪ್ಪು** **ಲೇಖಕರು : ಗುರುರಾಜ ಕರ್ಜಗಿ.**

೧) ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ?

**ಉತ್ತರ** : ವ್ಯಾಪಾರ ಕಡಿಮೆಯಾಗುತ್ತಿದೆ, ರೂಪಾಯಿ ಬೆಲೆ ಕುಸಿಯುತ್ತಿದೆ, ಹಣಕ್ಕೆ ಬೆಲೆಯೇ ಇಲ್ಲ, ಮಕ್ಕಳು ಬೆಳೆಯುತ್ತಿದ್ದಾರೆ, ಅವರನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿದೆ,

೨) ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು ?

**ಉತ್ತರ** : ಕೆಲವು ಅತ್ಯಂತ ಬೆಲೆಬಾಳುವಂತಹವು, ಚೈನಾ ಪಿಂಗಾಣಿಗಳು, ಕೆಲವು ಸುಂದರ ಗಾಜಿನವು, ಕೆಲವು ಪ್ಲಾಸ್ಟಿಕ್ ಕಪ್ಪುಗಳು, ಇನ್ನು ಕೆಲವು ಏನೂ ಬೆಲೆಬಾಳದ ಗಾಜಿನವು ಮತ್ತು ಕೆಲವು ಸ್ಟೀಲಿನ ಲೋಟಗಳು ಇದ್ದವು.

೩) ಹೆಡ್ ಮಾಸ್ತರರು ಮಕ್ಕಳಿಗೆ ಏನೆಂದು ಹೇಳಿ ಅಡುಗೆ ಮನೆಗೆ ಹೋದರು ?

**ಉತ್ತರ** : "ಮಕ್ಕಳೇ ಒಂದು ಐದು ನಿಮಿಷ ಇರಿ. ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವರ್ಷವಾಯಿತು.ಆದರೆ ನನ್ನ ಕಾಫೀ ಕೂಡ ತುಂಬ ಚೆನ್ನಾಗಿರುತ್ತದೆ" ಎಂದು ಅಡುಗೆ ಮನೆಗೆ ಹೋದರು.

೪) ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು?

**ಉತ್ತರ** : ಭಗವಂತ ನಮಗೆ ಜೀವನ ಎನ್ನುವ ಕಾಫಿ ಕೊಟ್ಟಿದ್ದಾನೆ. ಅವನು ಕೊಡುವುದು ಕಾಫೀ ಮಾತ್ರ. ಕಪ್ಪುಗಳನ್ನು ಅಲ್ಲ. ಅಲಂಕಾರಗಳ ಬೆನ್ನತ್ತಿ ಓಡಿ ಜೀವನವನ್ನು ಮರೆಯಬೇಡಿ.ಸಿಕ್ಕಿರುವುದನ್ನು ಚೆನ್ನಾಗಿ ಅಸ್ವಾದಿಸಿ.ಕಪ್ಪುಗಳ ಚಿಂತೆ ಬೇಡ, ಕಾಫೀ ಅಸ್ವಾದಿಸಿ ಎಂದು ಹೇಳಿದರು.

**(ಗದ್ಯ ೬) ಟುಸ್ಸೋಡ್ ವ್ಯಾಕ್ಸದ ಮ್ಯೂಸಿಯಂ** **ಲೇಖಕರು : ಬಸವಪ್ರಭು ಪಾಟೀಲ.**

೧) ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು ?

**ಉತ್ತರ** :1666 ರಲ್ಲಿ ಲಂಡನ್‌ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿ, 2 ದಿನ ಲಂಡನ್ ಹೊತ್ತಿ ಉರಿಯಿತು. 1300 ಮನೆಗಳು, 80 ಚರ್ಚ್‌ಗಳು ಸುಟ್ಟು ಹೋದವು.ಅದಕ್ಕಿಂತ ಒಂದೆರಡು ವರುಷದ ಹಿಂದೆ, ಒಂದೇ ಪ್ಲೇಗಿಗೆ ಲಂಡನ್‌ನಲ್ಲಿ ಹನ್ನೆರಡು, ಹದಿಮೂರು ಸಾವಿರ ಜನರು ಸತ್ತು ಹೋದ ವಿಚಾರಗಳನ್ನು ತಿಳಿಸಿದನು.

೨) ಥೇಮ್ಸ್ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ ?

**ಉತ್ತರ** :ಥೇಮ್ಸ್ ನದಿಯ ದಕ್ಷಿಣಕ್ಕೆ ಉದ್ಯಮಗಳು, ಫ್ಯಾಕ್ಟರಿಗಳು, ಹೆಚ್ಚಾಗಿ ರಾಜಕಾರಣಿಗಳು ಇರುತ್ತಾರೆ. ಉತ್ತರಕ್ಕೆ ವ್ಯಾಪಾರಿಗಳು, ಕಡಿಮೆ ಆದಾಯ ಹೊಂದಿರುವವರು ವಾಸಿಸುತ್ತಾರೆ.

೩) ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು?

**ಉತ್ತರ** : ಥೇಮ್ಸ್ ನದಿಯ ಮೇಲೆ 13 ಬ್ರೀಜ್‌ಗಳಿವೆ. ಅದರಲ್ಲಿ ಟವರ್ ಬ್ರಿಜ್‌ಪ್ರಮುಖವಾದುದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದೂವರೆ ಎರಡು ನಿಮಿಷದಲ್ಲಿ ಮೇಲಕ್ಕೆದ್ದು ಹಡಗುಗಳು ಹೋಗಲು ದಾರಿ ಮಾಡಿಕೊಡುತ್ತದೆ.

೪) ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೆಗಳಾವುವು ?

**ಉತ್ತರ** :ಥೇಮ್ಸ್ ನದಿಯ ಮೇಲೆ ವೆಸ್ಟ್ ಮಿನಿಸ್ಟರ್ ಸೇತುವೆ, ವಾಟರ್ಲೂ ಸೇತುವೆ, ಹಾಗೂ ಲಂಡನ್ ಸೇತುವೆ ಪ್ರಸಿದ್ಧವಾಗಿವೆ.

೫) 'ಟವರ್ ಆಫ್ ಲಂಡನ್'ನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ ?

**ಉತ್ತರ** : ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸುವ ಜಾಗ, ರಾಜ ಮನೆತನಗಳಲ್ಲಿನ ವೈಷಮ್ಯ, ಅಸೂಯೆ, ಕೊಲೆ, ಸುಲಿಗೆಗಳ ತಾಣವಿದು. ರಾಬರ್ಟ್ ಕ್ಲೈವ್ 1757 ರ ಪ್ಲಾಸಿ ಕದನದಲ್ಲಿ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳನ್ನು ಇಲ್ಲಿ ಇಡಲಾಗಿದೆಯಂತೆ. ಆದ್ದರಿಂದ ಇದು ಲಂಡನ್ನಿನ್ ನಿಗೂಢ ಸ್ಥಳವಾಗಿದೆ.

**(ಗದ್ಯ—೭)ನನ್ನ ಗೋಪಾಲ.** **ಲೇಖಕರು : ಕುವೆಂಪು.**

೧) ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಎಬ್ಬಿಸಿದಳು ?

**ಉತ್ತರ** :"ಗೋಪಾಲ, ಬೆಳಗಾಯ್ತು ಏಳು, ನೋಡಲ್ಲಿ ಸೂರ್ಯನಾರಾಯಣನು ಮೇಲೆ ಬಂದಿದ್ದಾನೆ. ಹಕ್ಕಿಗಳು ಹಾಡುತ್ತ, ಹಾರಾಡಿ ನಿನ್ನನ್ನು ಕರೆಯುತ್ತಿವೆ. ಹೂಗಳು ಬನದಲ್ಲಿ ನಿನಗಾಗಿ ಕಾದುಕೊಂಡಿವೆ. ಶಾಲೆಗೆ ಹೊತ್ತಾಗುತ್ತದೆ. ಗುರುಗಳು ಏನಂದಾರು ? ಏಳು ಗೋಪಾಲ ನನ್ನ ಕಂದ"

೨) ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು ?

**ಉತ್ತರ** :ಹೂಬನದಲ್ಲಿ ಸಾವಿರಾರು ಹೂಗಳು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿದ್ದವು. ಹಕ್ಕಿಗಳ ಇಂಪಾದ ಗಾನ !ತಂಗಾಳಿ !ಸೂರ್ಯದೇವನ ಹೊಂಬೆಳಕು, ಹಸುರಾದ ಚಿಗುರು, ಹುಲ್ಲಿನ ಮೇಲೆ ಕೋಟ್ಯಾಂತರ ಹಿಮಮಣಿಗಳು ಮಿರುಗುವ ಲೀಲೆ, ಮನೆಗಿಂತ ಬನವೇ ಸೊಗಸಮ್ಮ" ಎಂದು ವರ್ಣಿಸಿದನು.

೩) ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು ?

**ಉತ್ತರ** :ಗೋಪಾಲನ ತಾಯಿ ಬಡತನದಿಂದಾಗಿ, ಒಂದು ಸಣ್ಣ ಗುಡಿಸಿಲಿನಲ್ಲಿ ವಾಸಿಸುತ್ತಿದಳು. ಚರಕವನ್ನು ನೂಲಿ, ನೂಲು ತೆಗೆಯುತ್ತಿದ್ದರು, ಆ ನೂಲು ಮಾರಿ ಬಂದ ಮೂರು ಕಾಸಿನಲ್ಲಿ ತಮ್ಮ ಸಂಸಾರವನ್ನು ಸಾಗುತ್ತಿದ್ದರು.

೪) ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು ?

**ಉತ್ತರ** :ತಲೆಯ ಮೇಲೊಂದು ಸಣ್ಣದೊಂದು ಕಿರೀಟ. ನವಿಲುಗರಿ, ಕೈಯಲ್ಲೊಂದು ಕೊಳಲು ಇವು ಬನದ ಗೋಪಾಲನ ವೇಷಭೂಷಣಗಳು.

**(ಪದ್ಯ—೧) ಏಣಿ.** **ಕವಯಿತ್ರಿ : ಸುಕನ್ಯಾ ಮಾರುತಿ.**

೧) ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು ?

**ಉತ್ತರ** : "ಮೇಲಂತಸ್ತು ಯಾವಾಗಲೂ ಶಾಶ್ವತವಲ್ಲ, ಅದೂ ಸುರಕ್ಷಿತವೂ ಅಲ್ಲ. ಆಕಾಶದಲ್ಲಿ ಎಷ್ಟೇ ಹೊತ್ತು ಹಾರಾಡಿದರೂ ಮತ್ತೆ ಅವರು ಕೆಳಗೆ ಇಳಿಯಲೇಬೇಕು. ಹಾಗೆಯೇ ಸಹಾಯ ಮಾಡಿದವರನ್ನು ಎಂದೂ ಮರೆಯಬಾರದು, ಅವರನ್ನು ಮರೆತರೆ ಒಳತಿಲ್ಲ" ಎಂದು ಉಪದೇಶ ಮಾಡುತ್ತದೆ.

೨) ಏಣಿ ಹೇಳಿಕೊಳ್ಳುವ ಕಷ್ಟಗಳೇನು?

**ಉತ್ತರ** :ಜನಸಾಮಾನ್ಯರು ಏಣಿಯ ಮೇಲೆ ಭಾರವನ್ನು ಹಾಕಿ ಮೇಲಕ್ಕೆ ಏರಿದಾಗ, ಅದು ಅವರ ಭಾರವನ್ನು ಕಷ್ಟಪಟ್ಟು ಹೊತ್ತು ಸಹಿಸಬೇಕಾಗುತ್ತದೆ, ಹಾಗೂ ಅವರು ಕೆಳಗೆ ಬೀಳದಂತೆ ಎತ್ತಿ ಹಿಡಿಯುಬೇಕಾಗುತ್ತದೆ.

೩) ಮೇಲೇರಿದವನಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ ?

**ಉತ್ತರ** :ಮೇಲೇರಿದವರು ಏಣಿಯ ಸಹಾಯವನ್ನು ಮರೆತು, ಮೇಲಂತಸ್ತಿನಲ್ಲಿ ಹಾರಾಡಿ, ನಂತರ ಅವರ ಸೊಕ್ಕು ಕರಗಿ, 'ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ' ಏಣಿಯ ಮಹತ್ವ ಅರಿವಾಗುತ್ತದೆ.

೪) ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ ?

**ಉತ್ತರ** :ಏಣಿಯು "ಯಾವ ಜನಸಾಮಾನ್ಯರಲ್ಲಿ ವಿನಯ, ವಿಧೇಯ ಇರುತ್ತದೆಯೋ ಅಂಥಹ ಜನಸಾಮಾನ್ಯರ ನಮ್ರತೆಗೆ ಕರಗಿ, ಅವರನ್ನು ಕೆಳಗೆ ಬೀಳದಂತೆ ಎತ್ತಿ ಹಿಡಿಯುತ್ತೇನೆ" ಎಂದು ಹೇಳುತ್ತದೆ.

**(ಪದ್ಯ೨)ಬೋಧಿವೃಕ್ಷದ ಹಾಡು** **ಕವಿ : ಬಸವರಾಜ ಸಬರದ.**

೧) ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?

**ಉತ್ತರ** : ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ "ಬೆಳಿಗ್ಗೆ ಆಕಾಶದಲ್ಲಿ ಸೂರ್ಯನು ಬೆಳಗಿ ಬೋಧಿವೃಕ್ಷದಲ್ಲಿ ಕಂಡ ಮಹಾ ಬೆಳಕು" ಎಂದು ಬಣ್ಣಿಸಿದ್ದಾರೆ.

೨) ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?

**ಉತ್ತರ** :ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿಯ "ಹೊಳೆಯು ಕೆರೆತುಂಬಿ ಹರಿಯುವಂತೆ ಕಂಡಿತು. ಗೂಡಿನಲ್ಲಿ ಹಕ್ಕಿಗಳ ಹೊಸರಾಗ ಕೇಳಿಸಿತು.ಎಲ್ಲ ಗಿಡಗಳೂ ಒಂದೊಂದು ಅಪ್ಪಿಕೊಂಡು ಕುಣಿಯುವಂತೆ ಕಾಣುತ್ತಿತ್ತು."

**(ಪದ್ಯ3 )ಸವಿಚೈತ್ರ.** **ಕವಿ : ಬಸವರಾಜ ಸಾದರ.**

೧) ಯುಗದ ಆದಿ ತಂದ ಸಂಭ್ರಮವೇನು ?

**ಉತ್ತರ** : ಪ್ರಕೃತಿಯು ನವವಧುವಿನಂತೆ ಶೃಂಗಾರಗೊಳ್ಳುತ್ತಾಳೆ. ಎಲ್ಲೆಲ್ಲೂ ಚಿಗುರೊಡೆದ ಎಲೆಗಳಿಂದ ಬಣ್ಣ ಬಣ್ಣದ ಫಲ–ಪುಷ್ಪಗಳಿಂದ ಕಂಪನ್ನು ಸೂಸುವ ಮರಗಳನ್ನು ಕಾಣಬಹುದಾಗಿದೆ.

೨) ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆ ಎಂದು ಕವಿ ವರ್ಣಿಸಿದ್ದಾರೆ ?

**ಉತ್ತರ** : ಚೈತ್ರದಲ್ಲಿ ಹಕ್ಕಿಗಳು ಮುಗಿಲು ಮುಟ್ಟುವಂತೆ ಪಂಚಮ ಸ್ವರದಲ್ಲಿ ಮಧುರವಾಗಿ ಹಾಡುತ್ತವೆ. ಆಕಾಶವು ಪ್ರತಿಧ್ವನಿಸುವಂತೆ ಕಾಣುತ್ತದೆ.

೩) ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು ?

**ಉತ್ತರ** : ಚೈತ್ರದಲ್ಲಿ ಪ್ರಾಣಿ ಪಕ್ಷಿಗಳು ಮೈಕೊಡವಿ ಎದ್ದು, ಹೊಸ ಚೈತನ್ಯದಿಂದ ತಮ್ಮ ತಮ್ಮ ಕಾರ್ಯಗಳಿಗೆ ಸಂತಸದಿಂದ ಹಾರಿ ಹೋಗುವಂತೆ ಗೋಚರಿಸಿದವು.

೪) ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ ?

**ಉತ್ತರ** : ಚೈತ್ರದಲ್ಲಿ ಹೊಸ ಹೊಸ ಭಾವನೆಗಳು ಕಂಡು ಬರುತ್ತವೆ. ಭೂಮಿಯ ಮೇಲಿನ ಪ್ರತಿಯೊಂದು ಜೀವಿಯಲ್ಲಿಯೂ ಹೊಸ ಚೈತನ್ಯ, ಉತ್ಸಾಹ ಮೂಡಿ ಬರುತ್ತದೆ. ಅವರ ಸಂತಸ ಸಂಭ್ರಮ, ಅವುಗಳ ಹಾಡಿನ ಪ್ರತಿಧ್ವನಿಕೆಯಲ್ಲಿ ನೆಲ ಮುಗಿಲನ್ನು ಮುಟ್ಟುತ್ತದೆ.

ಅಲಯ ಪ್ರೇಮ ಕನ್ನಡ

**(ಗದ್ಯ ೪) ಸದ್ದು ಮಾಡದಿರು.** **ಕವಿ : ಸಿ.ಪಿ.ಕೃಷ್ಣಕುಮಾರ.**

೧) ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು ?

**ಉತ್ತರ** :ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿಯು "ತಟ್ಟೆಯಲ್ಲಿ ಕರ್ಪೂರ ಕರಗುವಂತೆ, ದೀಪದೆದುರಿಗೆ ತಿಮಿರ ಸರಿಯುವಂತೆ, ರವಿ ಕಿರಣಗಳಿಗೆ ಇಬ್ಬನಿ ಕರಗಿ ನೀರಾಗುವ" ಹೋಲಿಕೆಗಳನ್ನು ನೀಡಿದ್ದಾರೆ.

೨) ಕೂಗಾಟದ ಬದುಕು ನಿಷ್ಪ್ರಯೋಜಕ ಎಂಬುದಕ್ಕೆ ಕವಿ ನೀಡುವ ನಿದರ್ಶನಗಳಾವುವು ?

**ಉತ್ತರ** :ಹಸಿಸೌದೆ ಬುಸುಗುಟ್ಟಿ ದನಿಯೆತ್ತುತ್ತದೆ. ಕಿಡಿ ಸೋಕಿದಾಗ ಮದ್ದು ಸಿಡಿದು ಅಬ್ಬರಿಸುತ್ತದೆ. ಆದರೆ ಹಾಗೆ ಕೂಗಾಡಿ ಹಾರಾಡುವುದರಿಂದ ಯಾವುದೇ ಪ್ರಯೋಜನವಿಲ್ಲ.ನಾವು ರವಿಕಿರಣಕ್ಕೆ ಇಬ್ಬನಿ ಕರಗುವಂತೆ ಮೌನವಾಗಿರಬೇಕು.

೩) ಕರ್ಪೂರದ ಕೆಲಸವೇನು ? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ ?

**ಉತ್ತರ** : ಕರ್ಪೂರವು ತಟ್ಟೆಯೊಳಗೆ ಮೌನವಾಗಿ ಕರಗುತ್ತದೆ. ದೀಪದೆದುರು ಕತ್ತಲೆ ನಿಲ್ಲದೆ ಸರಿಯುವಂತೆ ತನ್ನ ಕರ್ತವ್ಯವನ್ನು ಶಾಂತ ರೀತಿಯಿಂದ ಪೂರೈಸುತ್ತದೆ.

೪) ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ ?

**ಉತ್ತರ** : "ದೀಪದೆದುರು ಕತ್ತಲೆ ನಿಲ್ಲದೆ ಮೌನವಾಗಿ ಸರಿಯುವಂತೆ, ಕರ್ಪೂರವು ತಟ್ಟೆಯೊಳಗೆ ಮೌನವಾಗಿ ಕರಗುತ್ತದೆ. ಅದೇ ರೀತಿ ಮಾನವನು ತನ್ನ ಬದುಕನ್ನು ಶಾಂತ ರೀತಿಯಿಂದ ಬದುಕಬೇಕು" ಎಂದು ಹೇಳಿದ್ದಾರೆ.

**(ಪದ್ಯ ೫.)ಗುರಿ.** **ಕವಿ : ಎಂ. ಗೋಪಾಲಕೃಷ್ಣ ಅಡಿಗ.**

೧) ನಮ್ಮ ಬದುಕು ಕೆಸರಿನ ಕಮಲದಂತಿರಬೇಕು ಏಕೆ ?

**ಉತ್ತರ** :ಕಮಲವು ಮೇಲೆ ಬಾಂದಳವನ್ನು ನೋಡುತ್ತ, ಹೊಳೆಯುವ ಸೂರ್ಯನ ಕಿರಣಗಳ ಸಿರಿಗೆ ಮೆರೆದಾಡುತ್ತ ವಿಜೃಂಭಿಸುತ್ತದೆ. ಆದ್ದರಿಂದ ನಮ್ಮ ಬದುಕು ಕೆಸರಿನ ಕಮಲದಂತಿರಬೇಕು.

೨) ಅಡಿಗರು ಯಾವುದನ್ನು ಹೇಡಿತನ ಹಾಗೂ ಹೆಣ್ತನ ಎಂದು ಕರೆದಿದ್ದಾರೆ ?

**ಉತ್ತರ** :ಗಾಳಿ ಬಂದೆಡೆ ತಿರುಗುವುದು ಹೇಡಿತನ ಹಾಗೂ ದಾಳಿ ಬಂದೊಡನೆ ಶರಣಾಗುವುದು ಹೆಣ್ತನ ಎಂದು ಹೇಳಿದ್ದಾರೆ.

೩) ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಏಕೆ ?

**ಉತ್ತರ** : ಬದುಕಿಗೊಂದು ಗುರಿ ಇಲ್ಲದಿದ್ದರೆ ಎಲ್ಲಿಗೆ ಹೋಗಬೇಕೆಂದು ಗೊತ್ತಾಗದೆ, ಅಪಾರವಾದ ಕಡಲಲ್ಲಿ ಚುಕ್ಕಾಣಿಯಿಲ್ಲದ ನೌಕೆಯನ್ನು ನಡೆಸಿದಂತಾಗುತ್ತದೆ. ಆಗ ಮಾನವ ಯಾವುದೇ ಸಾಧನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು.

೪) ಜೀವನದಲ್ಲಿ ಒಂದೇ ಗುರಿ ಇರಬೇಕು ಎಂಬುದಕ್ಕೆ ಅಡಿಗರು ನೀಡುವ ನಿದರ್ಶನಗಳಾವುವು ?

**ಉತ್ತರ** : ಒಂದು ಬಾಣಕೆ ಒಂದೇ ಗುರಿಯಿರುತ್ತದೆ, ಒಂದು ದೇಹದೊಳಗೆ ಒಂದೇ ಆತ್ಮವಿರುತ್ತದೆ. ಒಂದು ಜೀವನಕ್ಕೆ ಹಲವು ಸಾಧ್ಯತೆಗಳು ಇರಲು ಸಾಧ್ಯವಿಲ್ಲ. ಆದ್ದರಿಂದ ಜೀವನದಲ್ಲಿ ಒಂದೇ ಗುರಿಯಿರಬೇಕೆಂದು ಹೇಳಿದ್ದಾರೆ.

**(ಪದ್ಯ—6)ಮೂಡಲ್ ಕುಣಿಗಲ್ ಕೆರೆ.** **ಕವಿ : ಜನಪದರು.**

೧) ಕುಣಿಗಲ್ ಕೆರೆ ಎಂಥವರನ್ನೂ ಬೆರಗುಗೊಳಿಸುವಂತಿತ್ತು ಏಕೆ ?
**ಉತ್ತರ** :ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭೋಗವಾಗಿದೆ. ಇಲ್ಲಿ ಮೂಡಿ ಬರುವ ಚಂದಿರನ ದೃಶ್ಯವಂತೂ ಅದ್ಭುತ.

೨) ಭಾವ ಬಣ್ಣದ ಸೀರೆಯನ್ನು ತಂದದ್ದು ಏಕೆ ?
**ಉತ್ತರ** :ಕೆರೆ ತುಂಬಿದ ಸಂದರ್ಭದಲ್ಲಿ ಬಾಗಿನ ಅರ್ಪಿಸುವುದು ವಾಡಿಕೆಯಾಗಿದೆ. ಬಾಗಿನ ಕೊಡುವಾಗ ಪೂಜಾ ಸಾಮಗ್ರಿಯೊಂದಿಗೆ ಖುಷಿಯಿಂದ ಸೀರೆ, ಕುಪ್ಪಸ, ಹಣ್ಣು ಹಂಪಲಗಳನ್ನು ತಂದು ನೀರಿಗೆ ಬಿಡುವುದು ಇಲ್ಲಿನ ವಾಡಿಕೆ.

೩) ಕುಣಿಗಲ್ ಕೆರೆಯ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?
**ಉತ್ತರ** : ಮೀನು ಹಿಡಿಯಲು ಬಲೆ ಬೀಸಲಾಗುತ್ತದೆ. ಅದರಲ್ಲಿ ಸಿಕ್ಕಿಕೊಂಡ ಮೀನುಗಳು ಉಸಿರಾಡಲಾರದೆ ವಿಲವಿಲ ಒದ್ದಾಡುತ್ತವೆ. ಮೀನುಗಳ ಈ ಒದ್ದಾಡುವ ಪರಿಯನ್ನು ಹೇಳುವ ಸಂದರ್ಭದಲ್ಲಿ ಬೊಬ್ಬೆ ಹೊಡೆಯುತ್ತವೆ ಎಂದು ಹೇಳಲಾಗಿದೆ.

೪) ಕುಣಿಗಲ್ ಕೆರೆಯ ನೀರುಂಡು ಬೆಳೆದ ಬಾಳೆಯನ್ನು ಜನಪದರು ಏನೆಂದು ವರ್ಣಿಸಿದ್ದಾರೆ ?
**ಉತ್ತರ** :ಕುಣಿಗಲ್ ಕೆರೆಯ ನೀರುಂಡು ದಷ್ಟಪುಷ್ಟವಾಗಿ ಬೆಳೆದ ಬಾಳೆ ಗಾಳಿಯ ಹೊಯ್ದಾಟಕ್ಕೆ ಅತ್ತಿತ್ತ ತೂಗಾಡುತ್ತವೆ. ಹೀಗಾಗಿ ಹಣ್ಣಿನ ಭಾರದಿಂದ ತೂಗಾಡುತ್ತಿರುವ ಬಾಳೆಯನ್ನು ಜನಪದರು ಗೊಂಬಾಳೆ ನಡುಗ್ಯಾವ ಎಂದು ವರ್ಣಿಸಿದ್ದಾರೆ.

**(ಪದ್ಯ ೭) -- ವಚನಗಳು** **ವಚನಕಾರರು : ಬಸವಣ್ಣ. ಸಿದ್ಧರಾಮ. ಅಕ್ಕಮಹಾದೇವಿ.**

೧) ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?
**ಉತ್ತರ** :ಜನರು ನೀರನ್ನು ಕಂಡಲ್ಲಿ ಮುಳುಗುತ್ತಾರೆ. ಮರವನ್ನು ಕಂಡರೆ ಸುತ್ತುತ್ತಾರೆ.ಜನರು ಕೂಡಲ ಸಂಗಮನನ್ನು ಮೆಚ್ಚದೆ ಬತ್ತುವ ಜಲವನ್ನು, ಒಣಗಿದ ಮರವನ್ನು ಮೆಚ್ಚುತ್ತಾರೆ.

೨) 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ" ಈ ಮಾತಿನ ಅರ್ಥ ವೈಶಿಷ್ಟ್ಯವೇನು ?
**ಉತ್ತರ** : 'ಮಾನವನ ರೂಪಕ್ಕಿಂತ ಆತನಲ್ಲಿರುವ ಗುಣ ಹೆಚ್ಚು ಪ್ರಾಮುಖ್ಯತೆಯನ್ನು ವಹಿಸುತ್ತದೆ. ಆದ್ದರಿಂದ ರೂಪವಿದ್ದು ಫಲವಿಲ್ಲ, ಒಳ್ಳೆಯ ಗುಣವಿರಬೇಕು' ಎಂಬುದು ಈ ಮಾತಿನ ಅರ್ಥವಾಗಿದೆ.

**(ಪದ್ಯ ೮) -- ನೀಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ.** **ಕವಿ : ಕುಮಾರವ್ಯಾಸ.**

೧) ಶತ್ರು ಬಲಕೆ 'ನಮೋ' ಎಂದು ಉತ್ತರನು ಏಕೆ ಹೇಳಿದನು ?
**ಉತ್ತರ** :ಕೌರವನ ಸೈನ್ಯವನ್ನು ನೋಡಿ 'ಭೂಮಿಯೇ ಈ ಸೈನ್ಯಕ್ಕೆ ಜನ್ಮ ನೀಡಿದೆಯೇನೋ' ಎನಿಸುತ್ತದೆ. 'ಈ ಸೈನ್ಯವನ್ನು ಸೋಲಿಸಲು ಶಿವನಿಗೆ ಮಾತ್ರ ಸಾಧ್ಯ, ನಮಗಂತೂ ಸಾಧ್ಯವೇ ಇಲ್ಲ' ಎಂದು ಎನಿಸಿ ಉತ್ತರನು 'ನಮೋ' ಎಂದನು.

೨) ಓಡಲು ಒಡೆವಂತೆ ಅರ್ಜುನನು ಮನದಲಿ ನಗಲು ಕಾರಣವೇನು ?
**ಉತ್ತರ** :ಕೌರವನ ಸೈನ್ಯವನ್ನು ನೋಡಿ ಉತ್ತರನು 'ನಮೋ' ಎಂದು'ಈ ಸಾರಥಿ ನನ್ನನ್ನು ಕೊಂದನು' ಎನ್ನುತ್ತ ಮೆಲ್ಲನೆ ರಥದ ಹಿಂಭಾಗಕ್ಕೆ ಬಂದು ರಥದಿಂದ ಧುಮುಕಿ ಓಡಲು ತೊಡಗುತ್ತಾನೆ. ಅದನ್ನು ನೋಡಿದ ಅರ್ಜುನನು ಮನದಲ್ಲಿ ನಗುತ್ತಾನೆ

೩) ‘ಕಾದನಡೆ’ ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು ?
**ಉತ್ತರ** :ಸಭೆಯಲ್ಲಿ ಹೆಣ್ಣು ಮಕ್ಕಳ ಮುಂದೆ ಬಾಯಿಗೆ ಬಂದಂತೆ ಜಂಬಕೊಚ್ಚಿಕೊಂಡು ಮಾತನಾಡಿದ ಉತ್ತರನು ಯುದ್ಧ ಭೂಮಿಯಲ್ಲಿ ಶತ್ರು ಸೈನ್ಯದೊಂದಿಗೆ ಹೋರಾಡದೆ ಓಡಿ ಹೋಗಲು ಪ್ರಯತ್ನಿಸಿದಾಗ ಅರ್ಜುನನು “ನಾನು ಸುಮ್ಮನೆ ಬಿಡುವೆನೇ. ನಡೆ ಯುದ್ಧದಲ್ಲಿ ಹೋರಾಡು” ಎಂದು ಅರ್ಜುನನು ಉತ್ತರನನ್ನು ಒತ್ತಾಯಿಸಿದನು.

೪) ಯುದ್ಧವನ್ನು ಮಾಡದೆಯೇ ಸುಖ ಪಡೆಯಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು ?
**ಉತ್ತರ** :ಯುದ್ಧದಲ್ಲಿ ಸೋತು (ಸತ್ತು) ಸ್ವರ್ಗ ಸೇರುವುದು ಉತ್ತರನಿಗೆ ಬೇಕಾಗಿರಲಿಲ್ಲ. ಆದ್ದರಿಂದ “ನನಗೆ ಸುರರ ಸತಿಯರು ಬೇಡ, ನಮ್ಮ ಅರಮನೆಯ ನಾರಿಯರೇ ಸಾಕು. ನನಗೆ ಇಂದ್ರ ಪದವಿಯೂ ಬೇಡ, ನಮ್ಮ ರಾಜ್ಯದ ಅರಸುತನವೇ ಸಾಕು” ಎಂದು ಸಮರ್ಥಿಸಿದನು.

# ಪೂರಕ ಓದು

**೧—ಕಳ್ಳರ ಗುರು.** **ಲೇಖಕರು : ಬೆಟಗೇರಿ ಕೃಷ್ಣಶರ್ಮ**

೧. ವೈದ್ಯರು ತನ್ನ ವೃತ್ತಿಯ ಕುರಿತು ಹೆಂಡತಿ ರತ್ನಳಿಗೆ ಏನು ಹೇಳಿದರು ?
**ಉತ್ತರ** :ವೈದ್ಯರು “ಈ ವೈದ್ಯ ವೃತ್ತಿ ದುಡ್ಡು ಗಳಿಸುವುದಕ್ಕೆ ಅಲ್ಲ. ಕೇವಲ ಸಮಾಜದ ಕ್ಷೇಮ ಸಾಧನೆಗಾಗಿ, ಸಮಾಜದಿಂದ ನಮಗೆ, ಬದುಕಿ ಇರುವ ಮಟ್ಟಿಗೆ ಏನಾದರೂ ದೊರೆತರೆ ಸಾಕು” ಎಂದು ಹೆಂಡತಿಗೆ ಹೇಳಿದರು.
೨. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು ?
**ಉತ್ತರ** :ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸದು. ಆದರೆ, ಮನುಷ್ಯನಾದರೆ ಸುಮ್ಮನೆ ಬಿಡುವನೆ ? ಅವನ ಆಸೆಯ ಹಾವು ಯಾರೂ ಕೆಣಕದಿದ್ದರೂ ಎಲ್ಲರನ್ನು ಕಡಿಯುವುದು”

೩. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು ?
**ಉತ್ತರ** :ವೈದ್ಯರು ಮಗುವಿನ ನಾಡಿ ಹಿಡಿದು, ಜ್ವರದ ರೀತಿ ಪರೀಕ್ಷಿಸಿದರು. ವೈದ್ಯರು ತಾವೇ ಕಾಡಿಗೆ ಹೋಗಿ ಕಷ್ಟದಿಂದ ಸೊಪ್ಪನ್ನು ಹುಡುಕಿ ತಂದು ರಸಮಾಡಿ, ಆ ರಸದೊಂದಿಗೆ ಮತ್ತೊಂದು ಸಲ ಔಷಧಿಯನ್ನು ಕುಡಿಸಿದರು.ಕುಪ್ಪೆಯಲ್ಲಿದ್ದ ಒಂದು ಲೇಹವನ್ನು ಹಣೆಯ ತುಂಬ ಬಳಿದರು.ಹೀಗಾಗಿ ಭೀಮನಾಯಕನ ಮಗುವಿನ ಜ್ವರ ಕಡಿಮೆಯಾಗಿ, ಪ್ರಾಣ ಉಳಿಯಿತು.

೪. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು ?
**ಉತ್ತರ** :ಭೀಮನಾಯಕನು“ಆ ಕಾಣದ ದೇವರು ಇದ್ದಾನೋ ಇಲ್ಲವೋ ಗೊತ್ತಿಲ್ಲ ! ಆದರೆ ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು. ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ” ಎಂದನು

೫. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು ?
**ಉತ್ತರ** :“ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ” ಎಂಬ ವೈದ್ಯರು ನುಡಿದರು. ಈ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು.

೬. ವೈದ್ಯರು “ತಮ್ಮ ಸೇವೆಯಿಂದ ಯಾವ ಪ್ರತಿಫಲಗಳು ಲಭಿಸಿದವು” ಎಂದು ತನ್ನ ಹೆಂಡತಿಗೆ ಹೇಳಿದರು ?
**ಉತ್ತರ** :ವೈದ್ಯರು “ನನ್ನ ವೈದ್ಯಕೀಯ ಪ್ರಾವಿಣ್ಯದಿಂದ ಒಬ್ಬ ತಾಯಿಯ ಕರುಳನ್ನು ಸಂತಯಿಸಿತು, ಒಬ್ಬ ತಂದೆಯ ಕುಲವನ್ನು ಮುಂದುವರಿಸಿತು” ಎಂದು ಹೇಳಿದರು.

೭. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿ ಏನೆಂದು ಹೇಳಿದನು ?

**ಉತ್ತರ** : "ದೇವರ ಒಡವೆಗಳನ್ನು ದೇವರಿಗೆ ಒಪ್ಪಿಸಲು ಬಂದಿದ್ದೇನೆ. ನನ್ನನ್ನು ಕ್ಷಮಿಸಿ. ದಯವಿಟ್ಟು ಎಲ್ಲವನ್ನೂ ಒಪ್ಪಿಸಿಕೊಳ್ಳಬೇಕು" ಎಂದು ಹೇಳಿದನು.

೮. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ ?

**ಉತ್ತರ** :ಕಳ್ಳರ ಗುರು ಭೀಮನಾಯಕನ ಮಗ ಜ್ವರದಿಂದ ಬಳಲುತ್ತಿದ್ದನು. ವೈದ್ಯರು ಅವನನ್ನು ಬದುಕಿಸಿದರು.ಮಗನ ಪ್ರಾಣಉಳಿಸಿದರಲ್ಲಎಂದುಯೋಚಿಸಿ, ಭೀಮನಾಯಕನಿಗೆ ನಾಚಿಕೆಯಾಗಿ, ವೈದ್ಯರ ಮನೆಯಿಂದ ಕದ್ದುತಂದ ಎಲ್ಲ ಸಾಮಾನುಗಳನ್ನು ಮರಳಿ ತಂದು ವೈದ್ಯರಿಗೆ ಒಪ್ಪಿಸಿದನು.

೯. ಕಳ್ಳರ ಗುರುವಿನ ಮನಃಪರಿವರ್ತನೆ ಹೇಗಾಯಿತು ?

**ಉತ್ತರ** :"ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ" ಎಂದು ವೈದ್ಯರು ಹೇಳಿದ ಮಾತುಗಳು ಭೀಮನಾಯಕನ ಮೇಲೆ ಪರಿಣಾಮ ಬೀರಿಮನಃಪರಿವರ್ತನೆಯಾಯಿತು.

೧೦.'ಕಳ್ಳರ ಗುರು' ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರಗಳೇನು ?

**ಉತ್ತರ** :ಎಷ್ಟೇ ಕಷ್ಟ ಬಂದರೂ ಸಹಿಸಿಕೊಳ್ಳಬೇಕು. ಯಾರೊಂದಿಗೂ ವೈರತ್ವ ಸಾಧಿಸದೆ ಸಹಾಯ ಮಾಡಬೇಕು.ಬೇರೆಯವರ ಕಷ್ಟ ತಿಳಿದು ಪರಿಹರಿಸಲುಪ್ರಯತ್ನಿಸಬೇಕು.ಅದಲ್ಲದೆ ಜೀವಕ್ಕೆ ಬೆಲೆಕೊಟ್ಟು ಕಾಪಾಡಲು ಪ್ರಯತ್ನಿಸಬೇಕು.ಮಾನವಿಯತೆ ಮೆರೆಯಬೇಕು.ಎಂದೆಲ್ಲಾ ಕಲಿತುಕೊಳ್ಳಬಹುದಾಗಿದೆ.

**೦೨._ಹೊಂಗೆ ಬೇವುಗಳ ಹಾಡು.** **ಕವಿ : ಡಾ. ಎಚ್ ಎಲ್ ಪುಷ್ಪ.**

೧) ಬದುಕ ಬದುವ ಬೇಲಿ ಯಾವ ರೀತಿ ಇದೆ ?

**ಉತ್ತರ** :ಬದುಕ ಬದುವ ಬೇಲಿಯು ಹೊಂಗೆ ಮರದ ಜೋಲಿಯಂತೆ, ಅರಳಿದ ಹೂವಿನಂತೆ, ಮಲಗಿದ ಮಲ್ಲಿಗೆಯಂತೆ, ರೂಪದಲ್ಲಿ ತಾಯಿಯ ಕರುಳಿನಂತೆ, ತಾಯಿಯ ಮಡಿಲಿನಂತೆ ಇದೆ.

೨) ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ ?

**ಉತ್ತರ** :ಹೊಳೆಯ ದಂಡೆಯ ಸಾಲಿನಲ್ಲಿ ರಾಜ್ಯ ಹುಟ್ಟಿ, ಆಳಿ, ಉರುಳಿದ ಗತ ನೆನಪಗಳಿವೆ. ಶತಮಾನಗಳಿಂದ ನೇಗಿಲಯೋಗಿ ಶ್ರಮವಹಿಸಿ, ಉತ್ತಿ, ಬಿತ್ತಿ, ಬೆಳೆ ಬೆಳೆದ ನೆನಪಿದೆ. ಗೊಬ್ಬರದ ಹಾಡಿದೆ.ಜನರು ಮಾಡಿದ ಸಂತೆ, ಜಾತ್ರೆಗಳ ನೆನಪಿದೆ.

೩) ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ ?

**ಉತ್ತರ** :ಈ ಲೋಕವು ಬಣ್ಣ ಬಣ್ಣದ ಚಿಟ್ಟೆಗಳು ಹಾರಿ ಹೊರಡಿಸಿದ ಸಂಗೀತ ಕೇಳಿ ಸಂತೋಷಪಟ್ಟಿದೆ. ಬಣ್ಣ ಬಣ್ಣದ ಹೂವುಗಳ ಘಮಘಮಿಸುವ ಪರಿಮಳ ಸ್ವಾಧಿಸಿ ಸಂತೋಷಪಟ್ಟಿದೆ.ಇಲ್ಲೇ ಎಲ್ಲೋ ಅಡಗಿ ಇರುವ ನಾಳೆಯೆಂಬ ಖುಷಿಯಿದೆ.

೪) ನಾಗರೀಕತೆಯ ಬೆಳವಣಿಗೆಯ ಬಗ್ಗೆ ಕವಯಿತ್ರಿಗೆ ಯಾವ ಅಳುಕು ಇದೆ ?

**ಉತ್ತರ** :ಜನರು ತಮ್ಮ ಜೀವನದಲ್ಲಿ ಎಲ್ಲಾ ತಿಂದು ತೇಗಿ, ಬಗೆ ಬಗೆಯ ಕಾರುಗಳಲ್ಲಿ, ಪಟಪಟ ಸದ್ದು ಮಾಡುವ ಮೋಟಾರುಗಳಲ್ಲಿ, ಆಕಾಶದಲ್ಲಿ ವಿಮಾನಗಳಲ್ಲಿ ಓಡಾಡಿ, ಹಾರಾಡುತ್ತಿದ್ದಾರೆ. ಮುಂದೊಂದು ದಿನ ಇಂಧನ ತೀರಿಹೋದರೆ ಇವರ ಗತಿಯೇನು ?ಅದೇ ರೀತಿ ಬದುಕು ಸಹ ಇಂದೋ ನಾಳೆಯೋ ತೀರುತ್ತ ಬರುತ್ತಿದೆ. ಮುಂದೆ ಹೇಗೆ ?ಎಂಬ ಅಳುಕು ಕವಯಿತ್ರಿಗೆ ಇದೆ.

೫) ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ ?

**ಉತ್ತರ** :ತೆಂಗು ತಾರೆಗಳ ನಾಡಿನಲ್ಲಿ, ಬೆವರ ಹನಿಯ ಸಾಲೆಯಲ್ಲಿ ಜೀವದ ಅಮೃತ ಅಡಗಿದೆ. ಜೀವವನ್ನು, ಒಡಲನ್ನು ಹಿಂಡಿ ತೈಲಧಾರೆಯು ಹೊಮ್ಮಿ ಬರಬೇಕು.ಹೊಂಗೆ, ಹಿಪ್ಪೆಗಳ ಮೇಳ ನಡೆಯಬೇಕು.ನಾಳೆ ಎಂಬ ಭವಿಷ್ಯದ ಚಪ್ಪರದ ಕೆಳಗೆ, ಮನುಕುಲದ ಭವ್ಯ ಬದುಕು ಮೊಳಕೆಯೊಡೆದು ಅರಳಬೇಕು ಎಂದು ಕವಯಿತ್ರಿ ಆಶಿಸಿದ್ದಾರೆ.

**ಕಂಠಪಾಠಕ್ಕೆ ಪದ್ಯಗಳು.**

| | |
|---|---|
| **ಬೋಧಿವೃಕ್ಷದ ಹಾಡು**<br>ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು<br>ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು<br>ಅರಮನೆಯ ಮೋಹವನ್ನು ಹರಿದುಹಾಕಿ ಹೋದನು<br>ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು. | ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು<br>ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು<br>ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು<br>ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು. |
| **ಸವಿಚೈತ್ರ**<br>ಕೊರಡ ಕೊನರಿಸಿ ತುದಿಗೆ ಮುಗುಲ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ | ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು |
| **ಗುರಿ**<br>ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ<br>ಮಿಸುಪ ರವಿಕಿರಣಗಳ ಸಿರಿಗೆ ಮರೆದಾಡಿ<br>ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ<br>ಬಸಮಾಗು ಬಂದ ಮನುಜತೆಯ ಸಾರ್ಥಕತೆಗೆ | ಒಂದು ಬಾಣಕೆ ಗುರಿಯು ಹಲವಿರುವುದುಂಟೆ ?<br>ಒಂದು ದೇಹದೊಳಾತ್ಮವೆರಡಿರುವುದುಂಟೆ<br>ಒಂದು ಜೀವನಕೇಕೆ ಹಲವು ಸಾಧ್ಯಗಳು ?<br>ಒಂದೆ ಹಗ್ಗುರಿಗೆ ಹೋರಾಡು ಹಗಲಿರುಳು |
| **ವಚನಗಳು**<br>ನೀರ ಕಂಡಲ್ಲಿ ಮುಳುಗುವರಯ್ಯ<br>ಮರನ ಕಂಡಲ್ಲಿ ಸುತ್ತುವರಯ್ಯ<br>ಬತ್ತುವ ಜಲವ ಒಣಗುವ ಮರನ<br>ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ.<br>ಬಸವಣ್ಣ | ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ<br>ಧನವಿದ್ದು ಫಲವೇನು ದಯವಿಲ್ಲದನ್ನಕ್ಕ<br>ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ<br>ರೂಪಿದ್ದು ಫಲವೇನು ಗುಣವಿಲ್ಲದನ್ನಕ<br>ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ.<br>ಅಕ್ಕಮಹಾದೇವಿ. |

## ಲೇಖಕರ ಹಾಗೂ ಕವಿಗಳ ಸ್ಥಳ, ಕಾಲ, ಹಾಗೂ ಕೃತಿಗಳ ಪರಿಚಯ.

1) **ಅ ರಾ ಮಿತ್ರ :**

**ಸ್ಥಳ** :ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು. **ಕಾಲ** :1935.

**ಕೃತಿಗಳು** :ನಾನೇಕೆ ಕೊರೆಯುತ್ತೇನೆ, ಕವಿಗಳ ಬೆನ್ನೇರಿ, ಒಳನೋಟಗಳು,

**ಪ್ರಶಸ್ತಿಗಳು** : ನವರತ್ನರಾಮ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ ದೊರೆತಿವೆ.

2) **ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು :**

**ಸ್ಥಳ** :ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಹೆಡಿಯಾಲ. **ಕಾಲ** :1951.

**ಕೃತಿಗಳು** :ಜೀವನ ದರ್ಶನ, ಹುಟ್ಟು ಸಾವುಗಳ ಮಧ್ಯೆ, ಸಮಾಧಿಯ ಮೇಲೆ.

**ಪ್ರಶಸ್ತಿಗಳು** : ರಾಜ್ಯೋತ್ಸವ ಪ್ರಶಸ್ತಿ, ಪಾಲ್ ಹ್ಯಾರಿಸ್ ಪ್ರಶಸ್ತಿ, ಗೌರವ ಡಾಕ್ಟರೇಟ್ ಪುರಸ್ಕಾರ.

3) **ರಮೇಶಗೌಡ ಎಂ. ಕೆ. :**

**ಸ್ಥಳ** :ಧಾರವಾಡ ಜಿಲ್ಲೆಯ ನರಗುಂದ ತಾಲ್ಲೂಕಿನ ಕಿತ್ತೂರು ಗ್ರಾಮ. **ಕಾಲ** :1975.

**ಕೃತಿಗಳು** :ರೂಪ ಬಯಲು, ಅಮೃತಕ್ಕೆ ಹಾರಿದ ಗರುಡ,

**ಪ್ರಶಸ್ತಿಗಳು** : 'ರತ್ನಾಕರವರ್ಣಿ ಮುದ್ದಣ್ಣ ದತ್ತಿ' 'ವರ್ಷದ ಉತ್ತಮ ಕೃತಿ' ಪ್ರಶಸ್ತಿ ದೊರೆತಿವೆ.

4) **ಕೆ. ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ.**

5) **ಗುರುರಾಜ ಕರ್ಜಗಿ. :**

**ಸ್ಥಳ** :ಹಾವೇರಿ ಜಿಲ್ಲೆಯ ಕರ್ಜಗಿ **ಕಾಲ** : 1952.

**ಕೃತಿಗಳು** :ಕರಣಾಳು ಬಾ ಬೆಳಕೆ.(ಪ್ರಜಾವಾಣಿ ಪತ್ರಿಕೆಯಲ್ಲಿ ಅಂಕಣ)

6) **ಬಸವಪ್ರಭು ಪಾಟೀಲ್ ಬೆಟ್ಟದೂರು** :

**ಸ್ಥಳ** :ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬೆಟ್ಟದೂರು. **ಕಾಲ** :1947.

**ಕೃತಿಗಳು** :ಮಾತನಾಡಿ ಹೆಣಗಳೇ, ಇದೇನು ಕತೆ, ಬೆಳಗು

**ಕೆ. ಸಿದ್ದಯ್ಯಸ್ವಾಮಿ** :

**ಸ್ಥಳ** :ರಾಯಚೂರು ಜಿಲ್ಲೆಯ ಮಾನ್ವಿ ಕಾಲ : 1945.

7) **ಕುವೆಂಪು**

**ಸ್ಥಳ** :ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ **ಕಾಲ** : 29-12-1904.

**ಕೃತಿಗಳು** : ನವಿಲು, ಪಕ್ಷಿಕಾಶಿ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು,

**ಪ್ರಶಸ್ತಿಗಳು** :ಪದ್ಮಭೂಷಣ, ಕೇಂದ್ರ ಸಾಹಿತ್ಯ ಅಕಾಡೆಮಿ, ರಾಷ್ಟ್ರಕವಿ, ಜ್ಞಾನಪೀಠ ಪಂಪ ಕರ್ನಾಟಕ ರತ್ನ,

8) **ಸುಕನ್ಯಾ ಮಾರುತಿ.** :

**ಸ್ಥಳ** :ಬಳ್ಳಾರಿ ಜಿಲ್ಲೆಯ ಕೊಟ್ಟೂರ. **ಕಾಲ** :1956

**ಕೃತಿಗಳು** :ಪರಿಸರದಲ್ಲಿ, ನಾನು ನನ್ನವರು, ತಾಜಮಹಲಿನ ಹಾಡು, ನಾನೆಂಬ ಮಾಯೆ,

9) **ಬಸವರಾಜ ಸಬರದ** :

**ಸ್ಥಳ** :ಕೊಪ್ಪಳಜಿಲ್ಲೆಯ ಕುಕನೂರ. **ಕಾಲ** :1954

**ಕೃತಿಗಳು** :ನನ್ನವರ ಹಾಡು, ಹೋರಾಟ, ನೂರು ಹನಿಗಳು, ದನಿಯೆತ್ತಿ ಹಾಡೇನ.

**ಪ್ರಶಸ್ತಿಗಳು** : ಕುವೆಂಪು ಸಾಹಿತ್ಯ ಪುರಸ್ಕಾರ, ಕಾವ್ಯಾನಂದ, ಸಾಹಿತ್ಯ ಶ್ರೀ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ

10) **ಬಸವರಾಜ ಸಾದರ** :

**ಸ್ಥಳ** :ಧಾರವಾಡ ಜಿಲ್ಲೆಯ ಕುಂದಗೋಳ. **ಕಾಲ** :1955

**ಕೃತಿಗಳು** :ಹೊಸ ಆಲೋಚನೆ, ಮೃದುವಾಗಿ ಮುಟ್ಟು. ತಪ್ಪಂಡ.

**ಪ್ರಶಸ್ತಿಗಳು** : ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

11) ಸಿ. ಪಿ. **ಕೃಷ್ಣಕುಮಾರ** :

**ಸ್ಥಳ** : ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿ. **ಕಾಲ** :1939.

**ಕೃತಿಗಳು** :ಕನ್ನಡ ಚತುರ್ಮುಖ, ಪರಿಭಾವನೆ. ಜಾನಪದ ಪ್ರತಿಭೆ, ಕನ್ನಡ ನಾಗಾನಂದ.

12) **ಎಂ ಗೋಪಾಲಕೃಷ್ಣ ಅಡಿಗ :**

**ಸ್ಥಳ** : ಉಡುಪಿ ಜಿಲ್ಲೆಯ ಕುಂದಾಪು ತಾಲ್ಲೂಕಿನ ಮೊಗೇರಿ. **ಕಾಲ** :1918.

**ಕೃತಿಗಳು** : ಭಾವ ತರಂಗ, ಚಂಡೆಮದ್ದಳೆ, ಭೂಮಿಗೀತ, ನಡೆದುಬಂದ ದಾರಿ. ಆಕಾಶದೀಪ,

**ಪ್ರಶಸ್ತಿಗಳು** : ಪಂಪ, ರಾಜ್ಯೋತ್ಸವ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ,

13) **ಬಸವಣ್ಣ :**

**ಸ್ಥಳ** :ವಿಜಯಪುರ ಜಿಲ್ಲೆಯ ಬಾಗೇವಾಡಿ. **ಕಾಲ** :12 ನೇ ಶತಮಾನ.

**ಅಂಕಿತನಾಮ** : ಕೂಡಲಸಂಗಮದೇವ

**ಅಕ್ಕಮಹಾದೇವಿ :**

**ಸ್ಥಳ** :ಶಿವಮೊಗ್ಗ ಜಿಲ್ಲೆಯ ಉಡುತಡಿ. **ಕಾಲ** :12ನೇ ಶತಮಾನ.

**ಅಂಕಿತನಾಮ** : ಚೆನ್ನಮಲ್ಲಿಕಾರ್ಜುನ

14) **ಕುಮಾರವ್ಯಾಸ :**

**ಸ್ಥಳ** :ಗದುಗಿನ ಕೋಳಿವಾಡ. **ಕಾಲ** :1430.

**ಕೃತಿಗಳು** :ಐರಾವತ, ಗದುಗಿನ ಭಾರತ, ಕರ್ನಾಟ ಭಾರತ ಕಥಾಮಂಜರಿ.

15) **ಬೆಟಗೇರಿ ಕೃಷ್ಣಶರ್ಮ :**

**ಸ್ಥಳ** :ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಬೆಟಗೇರಿ. **ಕಾಲ** :1900.

**ಕೃತಿಗಳು** :ಮಾತನಾಡುವ ಕಲ್ಲು, ರಾಜಯೋಗಿ, ಅಶಾಂತಿಪರ್ವ, ಮಗಳ ಮದುವೆ.

16) **ಡಾ. ಎಚ್ ಎಲ್ ಪುಷ್ಪ :**

**ಸ್ಥಳ** :ಹಾಸನ ಜಿಲ್ಲೆಯ ಹೊಳೆನರಸೀಪುರ **ಕಾಲ** :1961.

**ಕೃತಿಗಳು** : ಅಮೃತಮತಿಯ ಸ್ವಾಗತ, ಗಾಜುಗೊಳ.

## ವ್ಯಾಕರಣಾಂಶಗಳು

**ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳು -- 49**

| | | | | | |
|---|---|---|---|---|---|
| **ಸ್ವರಗಳು** | -- | **13** | **ವ್ಯಂಜನಗಳು** | -- | **34** |
| **ವರ್ಗೀಯ ವ್ಯಂಜನಗಳು** | -- | **25** | **ಅವರ್ಗೀಯ ವ್ಯಂಜನಗಳು** | -- | **9** |
| **ಅನುನಾಸಿಕಗಳು** | -- | **05** | **ಅನುಸ್ವಾರ** | -- | **ಂ** |
| **ವಿಸರ್ಗ** | -- | **ಃ** | | | |

➢ **ಸಜಾತೀಯ ಸಂಯುಕ್ತಾಕ್ಷರ --** ಒಂದೇ ಜಾತಿಯ ಎರಡು ವ್ಯಂಜನಗಳೊಂದಿಗೆ ಒಂದು ಸ್ವರ ಸೇರಿ ಆಗುವುದು

**ಉದಾ:** ಅಮ್ಮ, ಅಣ್ಣ, ಕಲ್ಲು, ಮಣ್ಣು, ಕನ್ನಡ, ಸದ್ದು

- **ವಿಜಾತೀಯ ಸಂಯುಕ್ತಾಕ್ಷರ --** ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳ ಜತೆಯಲ್ಲಿ ಒಂದು ಸ್ವರ ಸೇರುವುದು

  **ಉದಾ:** ಶಾಸ್ತ್ರ, ಸ್ತ್ರೀ, ಅಕ್ಷರ, ವಿದ್ಯೆ, ಕಷ್ಟ, ತ್ರಿಶೂಲ

- **ರೂಢನಾಮ --** ಅನಾದಿಕಾಲದಿಂದ ರೂಢಿಯಾಗಿ ಬಂದಿರುವ ಸಾಮಾನ್ಯ ಹೆಸರುಗಳು

  **ಉದಾ:** ಹೆಂಗಸು, ಗಂಡಸು, ಹುಡುಗ, ಹುಡುಗಿ, ಮಕ್ಕಳು, ಜನರು, ನದಿ, ಬೆಟ್ಟ, ಸಮುದ್ರ, ಕೆರೆ, ಹಳ್ಳ, ಹಳ್ಳಿ, ಗಿಡ, ಮರ, ಹೊಳೆ, ಮುದುಕ, ಮುದುಕಿ, ಹೆಣ್ಣು ಎಲೆ, ಅಡಿಕೆ, ಹಸು ಎಮ್ಮೆ ಬಳ್ಳಿ ಇತ್ಯಾದಿ

- **ಅಂಕಿತನಾಮ --** ವ್ಯವಹಾರಕ್ಕಾಗಿ ಇಟ್ಟುಕೊಂಡಿರುವ ಹೆಸರುಗಳು

**ಉದಾ:** ಗಣೇಶ, ಕಾವೇರಿ, ಗಂಗಾ, ಬೆಂಗಳೂರು, ಧಾರವಾಡ, ಬೆಳಗಾವಿ, ಕರ್ನಾಟಕ – ಇತ್ಯಾದಿ

- **ಅನ್ವರ್ಥಕನಾಮ --** ವಸ್ತುವಿನ ರೂಪ ಹಾಗೂ ವ್ಯಕ್ತಿಯ ಗುಣಲಕ್ಷಣಗಳನ್ನು ಆಧರಿಸಿ ಅರ್ಥಕ್ಕೆ ಅನುಸಾರ ನೀಡುವ ಹೆಸರುಗಳು

**ಉದಾ:** ಜಾಣ, ಕವಿ, ಕುರುಡ, ಮೂಗ, ಕಿವುಡ, ದಡ್ಡ, ಸಾಧು, ಜಿಪುಣ, ಚಾಲಕ – ಇತ್ಯಾದಿ

- ಗುಣ ಸ್ವಭಾವಗಳನ್ನು ತಿಳಿಸುವುದು ಗುಣವಾಚಕ

ಉದಾ:

| ವಿಶೇಷಣ | ವಿಶೇಷ್ಯ |
|---|---|
| ಸಿಹಿ | ಹಣ್ಣು |
| ದೊಡ್ಡ | ನದಿ |
| ಒಳ್ಳೆಯ | ಹುಡುಗಿ |

- ಸಂಖ್ಯೆಯನ್ನು ಹೇಳುವುದು ಸಂಖ್ಯಾವಾಚಕ

ಉದಾ:

| ಸಂಖ್ಯಾವಾಚಕ | ಸಂಖ್ಯೇಯವಾಚಕ |
|---|---|
| ಎರಡು | ಇಬ್ಬರು, ಎರಡನೆಯ |
| ಮೂರು | ಮೂವರು, ಮೂರನೆಯ, ಮೂರರಿಂದ |
| ಐದು | ಐವರು, ಐದನೆಯ |

- ಭಾವನಾಮ -- ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದ

ಉದಾ: ಬಿಳಿಯದರ ಭಾವ –ಬಿಳುಪು    ಕರಿಯದರ ಭಾವ –ಕಪ್ಪು

ಆಡುವುದರ ಭಾವ –ಆಟ    ನೋಡುವುದರ ಭಾವ –ನೋಟ

- ಪರಿಮಾಣ ವಾಚಕ – ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ ಗಾತ್ರಗಳನ್ನು ಹೇಳುವುದು

ಉದಾ: ಪರಿಮಾಣ – ಹಲವು, ಕೆಲವು ಗಾತ್ರ – ಅಷ್ಟು, ಇಷ್ಟು

ಅಳತೆ – ಅಷ್ಟು, ಇಷ್ಟು

- ಪ್ರಕಾರ ವಾಚಕ -- ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದ

ಉದಾ: ಅಂಥ, ಅಂಥದು, ಅಂತಹುದು, ಇಂಥ, ಇಂಥದು, ಎಂತಹ, ಅಂಥವನು – ಇತ್ಯಾದಿ

- ಸರ್ವನಾಮ : ನಾಮ ಪದಗಳ ಬದಲಾಗಿ ಬಳಸುವ ಪದ

| | | |
|---|---|---|
| ಉತ್ತಮ ಪುರುಷ | ನಾನು | ನಾವು |
| ಮಧ್ಯಮ ಪುರುಷ | ನೀನು | ನೀವು |
| ಪ್ರಥಮ ಪುರುಷ | ಅವನು<br>ಅವಳು<br>ಅವರು | ಅದು<br>ಅವು |

- ಆತ್ಮಾರ್ಥಕ ಸರ್ವನಾಮ -- ತಾನು, ತಾವು, ತನ್ನ, ತಮ್ಮ

- ಪ್ರಶ್ನಾರ್ಥಕ ಸರ್ವನಾಮ -- ಪ್ರಶ್ನೆಯಿಂದ ಕೂಡಿದ ಸರ್ವನಾಮ
  ಉದಾ: ಏಕೆ? ಏನು?ಯಾರು?ಯಾವುವು? ಯಾವಳು? ಹೇಗೆ? ಯಾವುದು?

- ಕಾಲಗಳು :
  ಅ) ಭೂತಕಾಲ : ಈ ಹಿಂದೆ ನಡೆದು ಹೋದ ಕ್ರಿಯೆಯನ್ನು ಸೂಚಿಸುವುದು
  ಆ) ವರ್ತಮಾನ : ಕ್ರಿಯೆಯು ನಡೆಯುತ್ತಿರುವುದನ್ನು ಸೂಚಿಸುವುದು
  ಇ) ಭವಿಷ್ಯತ : ಮುಂದೆ ನಡೆಯುವ ಕ್ರಿಯೆಯನ್ನು ವಿವರಿಸುವ ಕಾಲ

| ಭೂತಕಾಲ | ವರ್ತಮಾನಕಾಲ | ಭವಿಷ್ಯತ್‌ಕಾಲ |
|---|---|---|
| ನೋಡಿದನು | ನೋಡುತ್ತಾನೆ | ನೋಡುವನು |
| ಹಾಡಿದನು | ಹಾಡುತ್ತಾನೆ | ಹಾಡುವನು |
| ನೋಡಿದಳು | ನೋಡುತ್ತಾಳೆ | ನೋಡುವಳು |
| ಹಾಡಿದಳು | ಹಾಡುತ್ತಾಳೆ | ಹಾಡುವಳು |

- ವಿಭಕ್ತಿ ಪ್ರತ್ಯಯಗಳು: ನಾಮ ಪ್ರಕೃತಿ ಅಥವಾ ಸರ್ವನಾಮಗಳನ್ನು ಬೇರೊಂದು ಪದದೊಡನೆ ಜೋಡಿಸುವಾಗ ಬಳಸುವ ಪ್ರತ್ಯಯಗಳು

| ವಿಭಕ್ತಿ | ನಾಮಪ್ರಕೃತಿ | ಪ್ರತ್ಯಯ | ನಾಮಪದ |
|---|---|---|---|
| ಪ್ರಥಮಾ | ಮರ | ಉ | ಮರವು |
| ದ್ವಿತಿಯಾ | ಮರ | ಅನ್ನು | ಮರವನ್ನು |
| ತೃತೀಯಾ | ಮರ | ಇಂದ | ಮರದಿಂದ |
| ಚತುರ್ಥಿ | ಮರ | ಗೆ, ಕೆ, ಇಗೆ, ಅಕ್ಕೆ | ಮರಕ್ಕೆ |
| ಪಂಚಮಿ | ಮರ | ದೆಸೆಯಿಂದ | ಮರದ ದೆಸೆಯಿಂದ |
| ಷಷ್ಠಿ | ಮರ | ಅ | ಮರದ |
| ಸಪ್ತಮಿ | ಮರ | ಅಲ್ಲಿ | ಮರದಲ್ಲಿ |
| ಸಂಬೋಧನಾ | ಮರ | ಏ, ಓ, ಇರಾ, ಈ | ಮರವೇ, ಮರಗಳಿರಾ |

- ಅವ್ಯಯಗಳು : ನಾಮಪದ ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಶಬ್ದಗಳು

## ಅವ್ಯಯದ ವಿಧಗಳು

| ಕ್ರ ಸಂ. | ಅವ್ಯಯದ ವಿಧಗಳು | ಉದಾಹರಣೆಗಳು |
|---|---|---|
| 1 | ಸಾಮಾನ್ಯ ಅವ್ಯಯ | ಚೆನ್ನಾಗಿ, ನೆಟ್ಟಗೆ, ತಟ್ಟನೆ, ಬಿಮ್ಮನೆ, ಸುಮ್ಮನೆ, ಬೇಗನೆ, ಹಾಗೆ |
| 2 | ಅನುಕರಣ ಅವ್ಯಯ | ಜುಳುಜುಳು, ಪಟಪಟ, ಧಗಧಗ, ಸುಯ್ಯನೆ, ದಡದಡ, ಢಣಢಣ |
| 3 | ಭಾವಸೂಚಕ ಅವ್ಯಯ | ಎಲಾ! ಅಯ್ಯೋ! ಅಕಟಕಟಾ! ಆಹಾ! ಭಲಾ! ಥೂ! ಅಬ್ಬಾ! |
| 4 | ಕ್ರಿಯಾರ್ಥಕ ಅವ್ಯಯ | ಉಂಟು, ಬೇಕು, ಬೇಡ, ಅಹುದು, ಸಾಕು, ಇಲ್ಲ, ಅಲ್ಲ, ಹೌದು |
| 5 | ಸಂಬಂಧಾರ್ಥಕ ಅವ್ಯಯ | ಮತ್ತು, ಅಥವಾ, ಆದ್ದರಿಂದ, ಆದುದರಿಂದ, ಅಲ್ಲದೆ, ಹಾಗಾದರೆ |
| 6 | ಕೃದಂತ ಅವ್ಯಯ | ಇರಲು, ಇರಲಾಗಿ, (ಬರುತ್ತಿರಲು, ಬರುತ್ತಿರಲಾಗಿ) |
| 7 | ತದ್ಧಿತಾಂತ ಅವ್ಯಯ | ಅಂತೆ, ತನಕ, ವರೆಗೆ, ಮಟ್ಟಿಗೆ (ರಾಮನಂತೆ, ಮನೆತನಕ...) |
| 8 | ಅವಧಾರಣಾರ್ಥಕ ಅವ್ಯಯ | ಅದೇ, ಇದೇ, ನಾನೇ – ಇವುಗಳಲ್ಲಿರುವ 'ಏ' ಕಾರ |

- ದ್ವಿರುಕ್ತಿ : ಒಂದೇ ಉಕ್ತಿಯನ್ನು ಎರಡು ಬಾರಿ ಹೇಳುವುದು
  'ದ್ವಿ' ಎಂದರೆ ಎರಡು, 'ಉಕ್ತಿ' ಎಂದರೆ ಮಾತು ಎಂದರ್ಥ
  ಉದಾ: ಕಟ್ಟಕಡೆ, ಕೆಳಕೆಳಗೆ, ತುತ್ತತುದಿ, ಮೊತ್ತಮೊದಲು, ಹೊಚ್ಚಹೊಸದು, ಒಂದೊಂದು

- ಜೋಡುನುಡಿ : ಅರ್ಥವಿರುವ ಪದದೊಂದಿಗೆ ಸಮಾನಾರ್ಥ, ವಿರುದ್ಧಾರ್ಥ ಇಲ್ಲವೆ ಅರ್ಥರಹಿತ ಪದಗಳನ್ನು ಜೋಡಿಸಿ ಬಳಸುವುದು
  ಉದಾ: ಸಮಾನಾರ್ಥಕ ಜೋಡುನುಡಿ : ಉಡಿಗೆತೊಡಿಗೆ, ಅವಳಿಜವಳಿ, ಟಾಪ್‌ಮೇಲೆ
  ವಿರುದ್ಧಾರ್ಥಕ ಜೋಡುನುಡಿ : ಸಿಹಿ ಕಹಿ, ನೋವು ನಲಿವು, ಆದಿ ಅಂತ್ಯ
  ಎರಡನೇ ಪದ ಅರ್ಥರಹಿತವಾಗಿರುವ ಜೋಡುನುಡಿ –ಕೂಲಿನಾಲಿ, ಗಿಡಗಂಟೆ ಕಾಳುಕಡ್ಡಿ, ಹುಳುಹುಪ್ಪಟೆ

- ಪಡೆನುಡಿ : ನುಡಿಗಟ್ಟು : ವಿಶೇಷಾರ್ಥ ನೀಡುವ ಪದಪುಂಜ
  ಉದಾ: ಕತ್ತಿಮಸೆ – ದ್ವೇಷಸಾಧಿಸು; ಕೈಕೊಡು – ಮೋಸಮಾಡು
  ಬೆನ್ನುತಟ್ಟು – ಪ್ರೋತ್ಸಾಹಿಸು; ಹೊಂಚುಹಾಕು – ಸಮಯ ಸಾಧಿಸು
  ನಾಯಿಜನ್ಮ – ಹೀನಬಾಳು; ತಲೆದೂಗು – ಮೆಚ್ಚುಗೆ ಸೂಚಿಸು

- ಕ್ರಿಯಾಪದ : ಒಂದು ಕ್ರಿಯೆ ಪೂರ್ಣ ಅರ್ಥವನ್ನು ಕೊಡುವ ಪದ
  ಕ್ರಿಯಾಪದದ ಮೂಲ ರೂಪ <u>ಧಾತು</u> ಅಥವಾ ಕ್ರಿಯಾಪ್ರಕೃತಿ
  ಉದಾ: ರಾಮನು ಶಾಲೆಗೆ <u>ಹೋಗುತ್ತಾನೆ</u> – ಕ್ರಿಯಾಪದ

- ಸಕರ್ಮಕ ಧಾತು :ಕರ್ಮಪದವನ್ನು ಅಪೇಕ್ಷಿಸುವ ಧಾತು
  ಉದಾ: ರಕ್ಷಿಸು, ಕಟ್ಟು, ಓದು, ಮಾಡು, ಉಣ್ಣು, ಕತ್ತರಿಸು, ತೆರೆ, ಸೇರು,

- ಅಕರ್ಮಕ ಧಾತು :ಕರ್ಮಪದವನ್ನು ಅಪೇಕ್ಷಿಸದ ಧಾತು
  ಉದಾ: ಮಲಗು, ಓಡು, ಹುಟ್ಟು, ಹೋಗು, ಏಳು, ಸೋರು, ನಾಚು

# ಸಂಧಿಗಳು

| ಲೋಪಸಂಧಿಗಳು : | | |
|---|---|---|
| ಬೆನ್ನು+ಅಟ್ಟು=ಬೆನ್ನಟ್ಟು | ಎಲ್ಲರ+ಎದೆ=ಎಲ್ಲರೆದೆ. | ಶರಣು+ಎಂಬೆ=ಶರಣೆಂಬೆ. |
| ಬೆನ್ನು+ಎಲುಬು=ಬೆನ್ನೆಲುಬು | ನೆಲದ+ಅಮ್ಮ=ನೆಲದಮ್ಮ. | ದೇಹದೊಳು+ಆತ್ಮ=ದೇಹದೊಳಾತ್ಮ. |
| ಒಬ್ಬ+ಒಬ್ಬರು=ಒಬ್ಬೊಬ್ಬರು | ಮಾತು+ಇಲ್ಲ=ಮಾತಿಲ್ಲ. | ಬಿರುದು+ಇರದೆ=ಬಿರುದಿರದೆ. |
| ಇನ್ನು+ಒಂದು=ಇನ್ನೊಂದು | ಬೇರೆ+ಒಬ್ಬ=ಬೇರೊಬ್ಬ. | ದೀಪದ+ಎದುರಿಗೆ=ದೀಪದೆದುರಿಗೆ. |
| ತನ್ನ+ಇಚ್ಛೆ=ತನ್ನಿಚ್ಛೆ | ನಿನಗೆ+ಅಲ್ಲದೆ=ನಿನಗಲ್ಲದೆ. | ಹಿಡಿದ+ಒಳ್ದಾರಿ=ಹಿಡಿದೊಳ್ದಾರಿ. |
| ಒಂದು+ಎರಡು=ಒಂದೆರಡು | ಬಟ್ಟಲು+ಆಕಾರ=ಬಟ್ಟಲಾಕಾರ | ವೇಷದಂತೆ+ಆಚರಣೆ=ವೇಷದಂತಾಚರಣೆ. |
| ಮತ್ತು+ಒಬ್ಬ=ಮತ್ತೊಬ್ಬ | ಅಂತು+ಇರದೆ=ಅಂತಿರದೆ. | ವೇದಾಂತವನು+ಓದಿ=ವೇದಾಂತವನೋದಿ. |
| ನಾಲ್ಕು+ಐದು=ನಾಲ್ಕೈದು | ಹಗಲು+ಇರುಳು=ಹಗಲಿರುಳು | ಸಿಡಿದು+ಅಬ್ಬರಿಸುವುದು=ಸಿಡಿದಬ್ಬರಿಸುವುದು. |
| ಕೊಳಲು+ಊದಿ=ಕೊಳಲೂದಿ | ಮೇಲೆ+ಏಳು=ಮೇಲೇಳು | ಆದಳು+ಇಂತು=ಆದಳಿಂತು |
| ದನಿಯನು+ಎತ್ತುವುದಲ್ತೆ=<br>ದನಿಯನೆತ್ತುವುದಲ್ತೆ | ಕರಗುವ+ಇಬ್ಬನಿವೊಲಿರು=<br>ಕರಗುವಿಬ್ಬನಿವೊಲಿರು | ಜೀವನಕೆ+ಏಕೆ=ಜೀವನಕೇಕೆ<br>ಮೇಲೆ+ಏಳು=ಮೇಲೇಳು<br>ಮೇಲೆ+ಏರಿ=ಮೇಲೇರಿ. |

| ಆಗಮ ಸಂಧಿ : | | |
|---|---|---|
| ಯಕಾರಾಗಮ ಸಂಧಿ : | ಕೈ+ಅಲ್ಲಿ=ಕೈಯಲ್ಲಿ. | ಶಾಲೆ+ಇಂದ=ಶಾಲೆಯಿಂದ. |
| ಕಾಶಿ+ಅಲ್ಲಿ=ಕಾಶಿಯಲ್ಲಿ | ಹೆದರಿಕೆ+ಆದರೆ=ಹೆದರಿಕೆಯಾದರೆ. | ಮೌನಿ+ಆಗು=ಮೌನಿಯಾಗು. |
| ಅಳಿ+ಆಸೆ=ಅಳಿಯಾಸೆ | ಗುರಿ+ಆಗು=ಗುರಿಯಾಗು. | |

| | | |
|---|---|---|
| ವಕಾರಾಗಮ ಸಂಧಿ : | ಗುಣ+ಇಲ್ಲ=ಗುಣವಿಲ್ಲ. | ಗುರು+ಅನ್ನು=ಗುರುವನ್ನು. |
| ಪಿತೃ+ಅನ್ನು=ಪಿತೃವನ್ನು | ಬಾಣ+ಅನ್ನು=ಬಾಣವನ್ನು. | ಧೈರ್ಯ+ಆಗಿ=ಧೈರ್ಯವಾಗಿ. |

| | | |
|---|---|---|
| ಆದೇಶಸಂಧಿ : | ಮಳೆ+ಕಾಲ=ಮಳೆಗಾಲ. | ಆಶ್ರಯ+ತಾಣ=ಆಶ್ರಯದಾಣ |
| ಬೆಟ್ಟ+ತಾವರೆ=ಬೆಟ್ಟದಾವರೆ | ಕಣ್+ಪನಿ=ಕಂಬನಿ. | ಹೂ+ಪುಟ್ಟಿ=ಹೂಬುಟ್ಟಿ |
| ಮುಂ+ಸೆರಗು=ಮುಂಜೆರಗು | ಹಲು+ಕಿರಿಯೆ=ಹಲುಗಿರಿಯೆ | |
| ಬೆಟ್ಟದ+ತಾವರೆ=ಬೆಟ್ಟದಾವರೆ=ತತ್ಪುರಷ ಸಮಾಸ. ಕಣ್ಣು+ತೆರೆ=ಕಣ್ದೆರೆ. (ಕಣ್ಣನ್ನು+ತೆರೆ=ಕಣ್ತೆರೆ=ಕ್ರಿಯಾ ಸಮಾಸ.) | | |
| ಸವರ್ಣದೀರ್ಘಸಂಧಿ : | | |
| | ಸತ್ಯ+ಆಗ್ರಹ=ಸತ್ಯಾಗ್ರಹ. | ಸರ್ವ+ಅಧಿಕಾರಿ=ಸರ್ವಾಧಿಕಾರಿ. |
| ಪಂಚ+ಅಕ್ಷರಿ=ಪಂಚಾಕ್ಷರಿ | ರುದ್ರ+ಅಕ್ಷಿ=ರುದ್ರಾಕ್ಷಿ. | ಸುವರ್ಣ+ಅಕ್ಷರ=ಸುವರ್ಣಾಕ್ಷರ. |
| ಶಸ್ತ್ರ+ಅಸ್ತ್ರ=ಶಸ್ತ್ರಾಸ್ತ್ರ | ಹಿಮ+ಆಲಯ=ಹಿಮಾಲಯ. | ಮಹಾ+ಅನುಭವ=ಮಹಾನುಭಾವ. |
| ವಿದ್ಯಾ+ಅರ್ಥಿ+ವಿದ್ಯಾರ್ಥಿ | ಸಚಿವ+ಆಲಯ=ಸಚಿವಾಲಯ. | ಲಕ್ಷ್ಮಿ+ಈಶ=ಲಕ್ಷ್ಮೀಶ |
| ಗಿರಿ+ಇಂದ್ರ=ಗಿರೀಂದ್ರ. | ದೇವ+ಆಲಯ=ದೇವಾಲಯ. | ತತ್ವ+ಅನುಯಾಯಿ=ತತ್ವಾನುಯಾಯಿ. |
| | ಸಂತಾನ+ಅಭಿವೃದ್ಧಿ=ಸಂತಾನಾ<br>ಭಿವೃದ್ಧಿ. | ವಂಶ+ಅಭಿವೃದ್ಧಿ=ವಂಶಾಭಿವೃದ್ಧಿ. |
| ಗುಣ ಸಂಧಿ : | | |
| ವೀರ+ಈಶ=ವೀರೇಶ | ವೀರ+ಇಂದ್ರ=ವೀರೇಂದ್ರ | ಜೀವ+ಉಲ್ಲಾಸ=ಜೀವೋಲ್ಲಾಸ. |
| ರಾಜ+ಋಷಿ=ರಾಜರ್ಷಿ. | ಮಹಾ+ಉತ್ಸವ=ಮಹೋತ್ಸವ | ಸಂತಾನ+ಉತ್ಪತ್ತಿ=ಸಂತಾನೋತ್ಪತ್ತಿ. |
| ಯಣ್ ಸಂಧಿ : | | |
| ಪಿತೃ+ಆರ್ಜಿತ=ಪಿತ್ರಾರ್ಜಿತ | ಅತಿ+ಉತ್ತಮ=ಅತ್ಯುತ್ತಮ. | ಕೋಟಿ+ಅಂತರ=ಕೋಟ್ಯಂತರ |
| ಅತಿ+ಅಂತ=ಅತ್ಯಂತ | ಅತಿ+ಉಕ್ತಿ=ಅತ್ಯುಕ್ತಿ. | ಮನು+ಅಂತರ=ಮನ್ವಂತರ. |
| ವೃದ್ಧಿಸಂಧಿ : | | |
| ಏಕ+ಏಕ=ಏಕೈಕ | ಭಾವ+ಐಕ್ಯ=ಭಾವೈಕ್ಯ | ದಿವ್ಯ+ಔಷಧಿ=ದಿವ್ಯೌಷಧಿ. |
| ಜಲ+ಓಘ=ಜಲೌಘ | | |

| ಜಶ್ತ್ವ ಸಂಧಿ : | | |
|---|---|---|
| ವಾಕ್+ದೇವಿ=ವಾಗ್ದೇವಿ | ಅಚ್+ಅಂತ=ಅಜಂತ | ಷಟ್+ಆನನ=ಷಡಾನನ. |
| **ಶ್ಚುತ್ವ ಸಂಧಿ :** | | |
| ಮನಸ್+ಶುದ್ಧಿ=ಮನಶ್ಶುದ್ಧಿ | ಸತ್+ಚಿತ್ರ=ಸಚ್ಚಿತ್ರ | ಜಗತ್+ಜ್ಯೋತಿ=ಜಗಜ್ಜ್ಯೋತಿ |
| **ಅನುನಾಸಿಕ ಸಂಧಿ :** | | |
| ದಿಕ್+ನಾಗ=ದಿಙ್ನಾಗ | ಷಟ್+ಮಾಸ=ಷಣ್ಮಾಸ | ಚಿತ್+ಮೂಲ=ಚಿನ್ಮೂಲ. |

**ನಾನಾರ್ಥ ಪದಗಳು :**

| | | |
|---|---|---|
| ಹಿಂಡು= ಗುಂಪು, ಹಿಸುಕು. | ಹೊಳೆ=ನದಿ, ಜಗಜಗಿಸು | ತೊರೆ=ತ್ಯಜಿಸು, ಝರಿ |
| ಕಾಡು=ಅರಣ್ಯ, ಪೀಡಿಸು. ಸತಾಯಿಸು | ಅಲೆ=ತೆರೆ, ತಿರುಗುವುದು | ಮದ್ದು–ಔಷಧ, ಸ್ಫೋಟಕ ಪುಡಿ, ಹೆಡ್ಡ. |
| ಶಿವ=ಶಂಕರ, ಹರ | ಕೆರೆ–ಕೆರಚು, ಕೆದರು, ಜಲಾಶಯ. | ಅಗಲು–ವಿಸ್ತಾರ, ದೂರವಾಗು |
| ತೊರೆ–ವೇಗ, ತೀವ್ರತೆ, ತ್ಯಜಿಸು, ಝರಿ | ಎತ್ತು–ಬಸವ, ಗೂಳಿ, ಮೇಲೆ ಎತ್ತುವುದು. | ಸೈನ್ಯ=ಪಡೆ, ಸೇನೆ |
| ಹೆಣ್ಣು=ಸ್ತ್ರೀ, ಮಹಿಳೆ | ಯುದ್ಧ=ಸಂಗ್ರಾಮ, ಧುರ | ಭೂಮಿ=ಇಳೆ, ಧರೆ |

**ದಿಕ್ಕುಗಳು**

| ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
|---|---|---|---|
| ಮೂಡಣ | ಪಡುವಣ | ಬಡಗಣ | ತೆಂಕಣ |

## ತತ್ಸಮ–ತದ್ಭವ

| | | | | | |
|---|---|---|---|---|---|
| ಆಗಸ–ಆಕಾಶ | ಆಶ್ರಯ–ಆಸರೆ | ಅಟವಿ–ಅಡವಿ | ಅಚ್ಚರಿ–ಆಶ್ಚರ್ಯ | ಅದ್ಭುತ–ಅದುಬುತ | ಆಸೆ–ಆಶೆ. |
| ಜನ್ಮ–ಜನುಮ, | ಕತೆ–ಕಥೆ. | ಕವಿ–ಕಬ್ಬಿಗ | ಕಾರ್ಯ–ಕಜ್ಜ. | ಕಾವ್ಯ–ಕಬ್ಬ. | ಖಗ–ಕಗ |
| ಠಾಣ–ಸ್ಥಾನ. | ದನಿ–ಧ್ವನಿ. | ದೃಷ್ಟಿ–ದಿಟ್ಟಿ. | ನಿದ್ರೆ–ನಿದ್ದೆ. | ಪೊಡವಿ–ಪೃಥ್ವಿ. | ಪುಣ್ಯ–ಹೂನ್ಯ. |
| ಪಕ್ಷಿ–ಹಕ್ಕಿ. | ಬನ–ವನ. | ಬಣ್ಣ–ವರ್ಣ. | ಬಸದಿ–ವಸತಿ. | ಬೇಸಾಯ–ವ್ಯವಸಾಯ. | ಬ್ರಹ್ಮ–ಬೊಮ್ಮ |
| ಭಕ್ತಿ–ಬಕುತಿ. | ಭೂಮಿ–ಬುವಿ. | ಬಿತ್ತರ–ವಿಸ್ತಾರ. | ಮುಖ–ಮೊಗ | ಮೂರ್ತಿ–ಮೂರುತಿ. | ಮಲ್ಲಿಗೆ–ಮಲ್ಲಿಕಾ. |
| ಯೋಗಿ–ಜೋಗಿ. | ಯುದ್ಧ–ಜುದ್ಧ. | ರಾಯ–ರಾಜ. | ವರ್ಣನೆ–ಬಣ್ಣನೆ. | ವೀರ–ಬೀರ. | ವನ–ಬನ. |
| ವರ್ಷ–ವರುಷ | ಶಾಲೆ–ಶಾಲಾ | ಸಂಸ್ಕೃತ–ಸಕ್ಕದ | ಸ್ತಂಭ–ಕಂಬ | ಸ್ಪರ್ಶ–ಪರುಷ | ಸಂತೋಷ–ಸಂತಸ |
| ಸಾವಿರ–ಸಹಸ್ರ | ಸಿರಿ–ಶ್ರೀ | ಸಂಪಿಗೆ–ಚಂಪಕ | ಸಂಜೆ–ಸಂಧ್ಯಾ | ಜ್ಞಾನ–ಜಾನ. | ಸೀರೆ – ಚೀರ |

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

| | | | | | |
|---|---|---|---|---|---|
| 1 | ಅಸಿ | ಯುದ್ಧ | ಮಸಿ | ಸಾಹಿತ್ಯ. | ಅರ್ಥ |
| 2 | ಕ್ರಿಮಿಕೀಟ | ಜೋಡುನುಡಿ | ದೊಡ್ಡ ದೊಡ್ಡ | ದ್ವಿರುಕ್ತಿ. | ವ್ಯಾಕರಣ |
| 3 | ಯುದ್ಧ | ಜುದ್ದ | ಶ್ರೀ | ಸಿರಿ. | ತತ್ಸಮ–ತದ್ಭವ |
| 4 | ಯೋಧ | ರಕ್ಷಣೆ | ರೈತ | ಉಳುವುದು | ಕೆಲಸ |
| 5 | ಆಶ್ರಯ | ಆಸರೆ | ವರ್ಣನೆ | ಬಣ್ಣನೆ. | ತತ್ಸಮ–ತದ್ಭವ |
| 6 | ಉಪಕಾರ | ಅಪಕಾರ | ಅದೃಷ್ಟ | ದುರಾದೃಷ್ಟ. | ವಿರುದ್ಧ ಪದ |
| 7 | ಗುರಿಯಾಗು | ಆಗಮ ಸಂದಿ | ಪರಹಿತಾಕಾಂಕ್ಷಿ | ಸವರ್ಣದೀರ್ಘಸಂಧಿ | ಸಂಧಿ |
| 8 | ಜಿಂಕೆ | ರೂಢನಾಮ | ಇಂದ್ರ | ಅಂಕಿತನಾಮ | ನಾಮಪದಗಳು |
| 9 | ಕೃತಜ್ಞತೆ | ಉಪಕಾರ ಸ್ಮರಣೆ | ಕೃತಘ್ನತೆ | ಉಪಕಾರಸ್ಮರಣೆ ಇಲ್ಲದಿರುವುದು | ಅರ್ಥ |

# ವಿರುದ್ಧಾರ್ಥಕ ಪದಗಳು

| | | | | |
|---|---|---|---|---|
| ಉಪಕಾರXಅಪಕಾರ. | ಆಸಕ್ತಿ X ನಿರಾಸಕ್ತಿ. | ಸ್ವದೇಶಿ X ವಿದೇಶಿ | ಆದಿX ಅಂತ್ಯ. | ಆಸೆX ನಿರಾಸೆ. |
| ಅದೃಷ್ಟX ದುರಾದೃಷ್ಟ. | ಗೌರವ X ಅಗೌರವ. | ಸ್ಪರ್ಶ X ಅಸ್ಪರ್ಶ. | ಇಳಿ X ಏರು. | ಕೆಡವು X ಕಟ್ಟು |
| ಅವಲಂಬನೆ Xಸ್ವಾವಲಂಬನೆ. | ಜ್ಞಾನX ಅಜ್ಞಾನ. | ಮುದುಡುXಅರಳು. | ತುದಿX ಬುಡ | ದಯೆX ನಿರ್ದಯೆ |
| ಆಶಾವಾದಿ X ನಿರಾಶಾವಾದಿ. | ಕರುಣೆX ನಿಷ್ಕರುಣೆ. | ವಿಧವೆ X ವಿದುರ | ನೆಲ X ಮುಗಿಲು. | ಜೀವ X ನಿರ್ಜೀವ |
| ಅತಿವೃಷ್ಟಿ X ಅನಾವೃಷ್ಟಿ. | ಸಹಜ Xಅಸಹಜ | ಹಳೆಯ X ಹೊಸ. | ನೋವುX ನಲಿವು. | ಕೃತಘ್ನ X ಕೃತಜ್ಞ |
| ಹೇಡಿX ಶೂರ. | ಸಂತೋಷXಅಸಂತೊಷ | ರುಚಿ X ಅರುಚಿ. | ಪರಹಿತX ಸ್ವಹಿತ. | ಪ್ರಜ್ಞೆ X ಅಪ್ರಜ್ಞೆ. |
| ಸತ್ಪರಿಣಾಮ Xದುಷ್ಪರಿಣಾಮ | ಪ್ರಗತಿ X ವಿಗತಿ | ಹಸಿ X ಒಣ | ರೋಗ X ನಿರೋಗ | ಪುಣ್ಯX ಪಾಪ |
| ಸ್ವೀಕರಿಸು X ತಿರಸ್ಕರಿಸು | ಪ್ರಬಲ X ದುರ್ಬಲ | ಹಗಲುX ಇರುಳು | ಬಾಹ್ಯ X ಆಂತರಿಕ | ಫಲ X ನಿಷ್ಫಲ, |
| ತಿರಸ್ಕಾರ X ಪುರಸ್ಕಾರ | ಬಡತನ X ಸಿರಿತನ | ಶಾಂತಿ X ಅಶಾಂತಿ | ಭಾರ X ಹಗುರ | ಬತ್ತುX ತುಂಬು |
| ಸ್ವಾತಂತ್ರ್ಯ X ಪಾರತಂತ್ರ್ಯ. | ಸುರಕ್ಷಿತ X ಅಸುರಕ್ಷಿತ | ಶ್ರೇಷ್ಠ X ಸಾಮಾನ್ಯ | ಭಯ X ನಿರ್ಭಯ | ಮುಳುಗುX ಏಳು |
| ಸಾಧಾರಣX ಅಸಾಧಾರಣ | ಬೈಗು X ಬೆಳಗು. | ಸದ್ದು X ಮೌನ | ಹೊರಗೆ X ಒಳಗೆ | ಹೊಸತು X ಹಳತು |
| ಶಾಶ್ವತ X ಕ್ಷಣಿಕ, ತಾತ್ಕಾಲಿಕ, | ಸಿಹಿ X ಕಹಿ | | | |

**ದ್ವಿರುಕ್ತಿ :**

| | | | | |
|---|---|---|---|---|
| ಮೊದಲುಮೊದಲು,<br>ಮೊಟ್ಟಮೊದಲು, | ಹೊಸದುಹೊಸದು,<br>ಹೊಚ್ಚಹೊಸದು | ಒಂದು ಒಂದು,<br>ಒಂದೊಂದು, | ಬಿಸಿಬಿಸಿ | ನಗುನಗುತ |

**ಜೋಡುನುಡಿ :**

| | | | | |
|---|---|---|---|---|
| ಉಡಿಗೆ–ತೊಡಿಗೆ<br>ಹುಳು–ಹುಪ್ಪಟೆ<br>ಆದಿ–ಅಂತ್ಯ | ಅವಳಿ–ಜವಳಿ,<br>ಸರ–ಮಾಲೆ, | ಕೂಲಿ–ನಾಲಿ<br>ಕಾಳು–ಕಡ್ಡಿ | ಗಿಡ–ಗಂಟೆ<br>ಸಿಹಿ–ಕಹಿ | ಟಾಪ್–ಮೇಲೆ<br>ನೋವು–ನಲಿವು |

**ಅನುಕರಣಾವ್ಯಯ :**

| | | | | |
|---|---|---|---|---|
| ಜುಳುಜುಳು, ದಡದಡ, | ಪಟಪಟ, ಢಣಢಣ, | ಧಗಧಗ, | ಸುಯ್ಯನೆ, | ಚಟಚಟ |

**ಪಡೆನುಡಿ–ನುಡಿಗಟ್ಟು. :**

| | | | | |
|---|---|---|---|---|
| ನಾಯಿಜನ್ಮ–ಹೀನಬಾಳು. | ಕೈಕೊಡು–<br>ಮೋಸಮಾಡು | ಬೆನ್ನುತಟ್ಟು–<br>ಪ್ರೋತ್ಸಾಹಿಸು, | ತಲೆದೂಗು–<br>ಮೆಚ್ಚುಗೆ ಸೂಚಿಸು. | ಕತ್ತಿಮಸೆ–<br>ದ್ವೇಷ ಸಾಧಿಸು, |
| ಹೊಂಚುಹಾಕು–ಸಮಯ<br>ಸಾಧಿಸು | | | | |

**ಸಮಾಸಗಳು :**

**ತತ್ಪುರುಷ ಸಮಾಸ :**

| | | |
|---|---|---|
| ಅರಸನ+ಮನೆ=ಅರಮನೆ | ಮಳೆಯ+ಕಾಲ=ಮಳೆಗಾಲ | ದಳದ+ಪತಿ–ದಳಪತಿ |
| ತೇರಿಗೆ+ಮರ=ತೇರುಮರ | ಮರದ+ಕಾಲು ಮರಗಾಲು | ಕವಿಗಳಿಂದ+ವಂದಿತ=ಕವಿವಂದಿತ |
| ಯುಗದ+ಆದಿ=ಯುಗಾದಿ | ಭೂಮಿಯ+ಸುರರು=ಭೂಸುರರು | ಇಂದ್ರನ+ಪದವಿ= ಇಂದ್ರಪದವಿ |

**ಕರ್ಮಧಾರೆಯ ಸಮಾಸ :**

| | | |
|---|---|---|
| ಶ್ವೇತವಾದ+ಛತ್ರ=ಶ್ವೇತಛತ್ರ<br>ಮೇಲಿನ+ಅಂತಸ್ತು=ಮೇಲಂತಸ್ತು<br>ಹೊಸದು+ರಾಗ=ಹೊಸರಾಗ<br>ಊರುವ+ಕೋಲು=ಊರುಗೋಲು<br>ಹೊಸದಾದ+ಕನ್ನಡ=ಹೊಸಗನ್ನಡ | ಹಿರಿದು+ಮರ=ಹೆಮ್ಮರ<br>ದಿವ್ಯವಾದ+ಪ್ರಕಾಶ=ದಿವ್ಯಪ್ರಕಾಶ<br>ಹೊನ್ನಿನ+ಬಾಳೆ–ಹೊಂಬಾಳೆ<br>ಹೊನ್ನಿನ+ಬೆಳಕು=ಹೊಂಬೆಳಕು<br>ನಿಡಿದು+ಓಟ=ನಿಟ್ಟೋಟ | ಹಿರಿದು+ಜೇನು=ಹೆಜ್ಜೇನು<br>ಬಲವೆಂಬ+ಕಡಲು=ಬಲಗಡಲು<br>ಸವಿಯ+ಚೈತ್ರ =ಸವಿಚೈತ್ರ<br>ಕಪ್ಪಾದ+ಹಕ್ಕಿ=ಕಪ್ಪಕ್ಕಿ<br>ತಂಪಾದ+ಗಾಳಿ=ತಂಗಾಳಿ |

| | | |
|---|---|---|
| **ಕ್ರಿಯಾ ಸಮಾಸ :** | | |
| ಗಂಜಿಯನ್ನು+ಉಂಡು=ಗಂಜಿಯುಂಡು | ಹಿಂಡನ್ನು+ಕಟ್ಟಿ=ಹಿಂಡುಗಟ್ಟಿ | ಕಾವ್ಯವನ್ನು+ಬರೆದು=ಕಾವ್ಯಬರೆದು |
| ಕೈಯನ್ನು+ಬೀಸು=ಕೈಬೀಸು | ಸ್ನಾನವನ್ನು+ಮಾಡು=ಸ್ನಾನಮಾಡು | ಮೈಯನ್ನು+ಕೊಡವಿ=ಮೈಕೊಡವಿ |
| ಕೈಯನ್ನು+ಮುಟ್ಟಿ=ಕೈಮುಟ್ಟಿ | ಕಣ್ಣನ್ನು+ತೆರೆದನು=ಕಣ್ಣುತೆರೆದನು | |
| **ದ್ವಿಗು ಸಮಾಸ :** | | |
| ಒಂದು+ಕಟ್ಟು=ಒಗ್ಗಟ್ಟು | ಎರಡು+ಮಡಿ=ಇಮ್ಮಡಿ | ಸಪ್ತಗಳಾದ+ಸ್ವರಗಳು=ಸಪ್ತಸ್ವರಗಳು |
| ಪಂಚಗಳಾದ ಇಂದ್ರಿಯಗಳು=ಪಂಚೇಂದ್ರಿಯಗಳು | | |
| **ಅಂಶೀ ಸಮಾಸ :** | | |
| ತಲೆಯ+ಮುಂದು=ಮುಂದಲೆ | ಕೈಯ+ಅಡಿ=ಅಂಗೈ | ಸೆರಗ+ಮುಂದು=ಮುಂಜೆರಗು |
| ಮೂಗಿನ+ತುದಿ=ತುದಿಮೂಗು | | |
| **ಗಮಕ ಸಮಾಸ :** | | |
| ಅವನು+ಹುಡುಗ=ಆ ಹುಡುಗ | ಅದು+ಮರ=ಆ ಮರ | ಅದು+ಕಲ್ಲು= ಆ ಕಲ್ಲು |
| ಇವಳು+ಹುಡುಗಿ= ಈ ಹುಡುಗಿ | ಅದು+ಮನೆ= ಆ ಮನೆ | ಅವರು+ಶಿಕ್ಷಕರು= ಆ ಶಿಕ್ಷಕರು |
| **ದ್ವಂದ್ವ ಸಮಾಸ:** ಗಿಡವೂ+ಮರವೂ+ಬಳ್ಳಿಯೂ+ಪೊದೆಯೂ=ಗಿಡಮರಬಳ್ಳಿಪೊದೆಗಳು.<br>ಕೆರೆಯೂ+ಕಟ್ಟೆಯೂ+ಬಾವಿಯೂ=ಕೆರೆಬಾವಿಕಟ್ಟೆಗಳು<br>ಸೂರ್ಯನೂ+ಚಂದ್ರನೂ+ನಕ್ಷತ್ರವೂ=ಸೂರ್ಯಚಂದ್ರನಕ್ಷತ್ರ | | |
| **ಬಹುವ್ರಿಹಿ ಸಮಾಸ :**<br>ತಾವರೆಯಂತೆ ಮುಖ ಉಳ್ಳವಳು = ವನಜಮುಖಿ | ಮೂರು+ಕಣ್ಣುಳ್ಳವ=ಮುಕ್ಕಣ್ಣ<br>ಡೊಂಕು+ಕಾಲುಳ್ಳವ=ಡೊಂಕುಗಾಲ | ಕೆಂಪು+ಕಣ್ಣುಳ್ಳುವ=ಕೆಂಗಣ್ಣ. |

## ಗ್ರಾಂಥಿಕ ರೂಪ

**ಬರ್‍ತಾನೆ = ಬರುತ್ತಾನೆ** **ಹಾದಿಲ್ = ಹಾದಿಯಲ್ಲಿ** **ನೋಡಾಲು = ನೋಡಲು**

**ಬಿಡುತಾವೆ = ಬಿಡುತ್ತವೆ** **ಕೆರೆಯಾಗೆ = ಕೆರೆಯಲ್ಲಿ**

## ಛಂದಸ್ಸು

ಪದ್ಯ ರಚನಾಶಾಸ್ತ್ರ ತಿಳಿಸುವುದು

ಎರಡು ಸಾಲುಗಳ ಪದ್ಯ – ದ್ವಿಪದಿ

ಮೂರು ಸಾಲುಗಳ ಪದ್ಯ – ತ್ರಿಪದಿ

ನಾಲ್ಕು ಸಾಲುಗಳ ಪದ್ಯ – ಚೌಪದಿ/ಕಂದ

ಆರು ಸಾಲುಗಳ ಪದ್ಯ – ಷಟ್ಪದಿ

ಲಘು –ಒಂದು ಮಾತ್ರೆಯಲ್ಲಿ ಉಚ್ಚರಿಸುವುದು ಗುರು – ಎರಡು ಮಾತ್ರೆಯಲ್ಲಿ ಉಚ್ಚರಿಸುವುದು

ಲಘು ಚಿಹ್ನೆ = 'U' ಗುರು ಚಿಹ್ನೆ = '–'

## ಅಕ್ಷರ ಗಣ

ಅಕ್ಷರ ಗಣಗಳಲ್ಲಿ ಮೂರು ಮೂರು ಅಕ್ಷರಗಳ ಒಂದು ಗುಂಪನ್ನು ಒಂದು ಗಣ ಎನ್ನಲಾಗುತ್ತದೆ.ಇದರಲ್ಲಿ ಎಂಟು ವಿಧಗಳಿವೆ.

| | | | | | | | |
|---|---|---|---|---|---|---|---|
| 'ಮ' | ಗಣ | = | '– – –' | 'ನ' | ಗಣ | = | 'U U U' |
| 'ಭ' | ಗಣ | = | '– U U' | 'ಯ' | ಗಣ | = | 'U – –' |
| 'ಜ' | ಗಣ | = | 'U – U' | 'ರ' | ಗಣ | = | '– U –' |
| 'ಸ' | ಗಣ | = | '– – U' | 'ತ' | ಗಣ | = | '– – U' |

## ಅಲಂಕಾರಗಳು

## ಗದ್ಯ ಪದ್ಯ ರಚನಾಶಾಸ್ತ್ರ

ಅ) ಉಪಮಾಲಂಕಾರ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದು

ಉದಾ: ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ.

| | | | |
|---|---|---|---|
| ಉಪಮಾನ | : ಚಂದ್ರ | ಉಪಮೇಯ | : ಮಗುವಿನ ಮುಖ |
| ಉಪಮಾವಾಚಕ | : ಅಂತೆ | ಸಮಾನ ಧರ್ಮ | : ಚಂದ್ರ ಮತ್ತು ಮಗುವಿನ ಮುಖದಲ್ಲಿರುವ ನಗು |

ಬ) ರೂಪಕಾಲಂಕಾರ : ಹೋಲಿಸುವ ವಸ್ತುಗಳೆರಡು ಒಂದೇ ಎಂದು ವರ್ಣಿಸುವುದು ಇಲ್ಲಿ ಉಪಮಾನ ಉಪಮೇಯಗಳ ನಡುವೆ ಭೇದ (ಅಭೇದ) ಇರುವುದಿಲ್ಲ.

ಉದಾ: ಸೀತೆಯ ಮುಖ ಕಮಲ ಅರಳಿತು.

ಉಪಮಾನ : ಕಮಲ

ಉಪಮೇಯ : ಸೀತೆಯ ಮುಖ

ಇಲ್ಲಿ ಸೀತೆಯ ಮುಖ ಮತ್ತು ಕಮಲ ಬೇರೆಬೇರೆ ಎಂದು ಹೇಳಲಾಗಿಲ್ಲ.

ಉದಾಹರಣೆಗಳು: ೧) ವನಜಮುಖಿ ೨) ನಾಡನರಿ ೩) ಬಲಗಡಲು

### ಗಾದೆಮಾತುಗಳು.

| | | |
|---|---|---|
| ಬೆಳ್ಳಗಿರುವದೆಲ್ಲ ಹಾಲಲ್ಲ | ಹಾಸಿಗೆ ಇದ್ದಷ್ಟು ಕಾಲು ಚಾಚು | ಕೈ ಕೆಸರಾದರೆ ಬಾಯಿ ಮೊಸರು |
| ಆಳಾಗಬಲ್ಲವನು ಅರಸಾಗಬಲ್ಲ | ಬೆಳೆಯುವ ಪೈರು ಮೊಳಕೆಯಲಿ | ತಾ ಕಳ್ಳ– ಪರರ ನಂಬ. |
| ಗಿಡವಾಗಿ ಬಗ್ಗದ್ದುಮರವಾಗಿ ಬಗ್ಗೀತೆ | ಮಾತು ಬೆಳ್ಳಿ ಮೌನ ಬಂಗಾರ | ಕುಂಬಾರನಿಗೆ ವರುಷದೊಣ್ಣೆಗೆ ನಿಮಿಷ |
| ಅತಿ ಆಸೆ ಗತಿಗೇಡು | ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ | ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳ ಇಲ್ಲ |
| ದೇಶ ಸುತ್ತಿ ನೋಡು ಕೋಶ ಓದಿ ನೋಡು | ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ | ಪೆನ್ನು ಖಡ್ಗಕ್ಕಿಂತ ಹರಿತ |
| ಒಕ್ಕಲಿಗ ಒಕ್ಕಿದರೆ ಜಗವೆಲ್ಲ ಬಿಕ್ಕುವುದು | ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು | ಸಜ್ಜನರ ಸಂಗ ಹೆಜ್ಜೇನು ಸವಿದಂತೆ |

### ಪ್ರಬಂಧ ರಚನೆ.

| | | |
|---|---|---|
| ಪರಿಸರ ಸಂರಕ್ಷಣೆ ಇಂದಿನ ಅಗತ್ಯ. | ಸಂಪರ್ಕ ಮಾಧ್ಯಮದಲ್ಲಿ ದೂರದರ್ಶನದ ಪಾತ್ರ. | ಗಣಕಯಂತ್ರದ ಪ್ರಯೋಜನಗಳು. |
| ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ | ಪರಿಸರ ಮಾಲಿನ್ಯದಿಂದ ಉಂಟಾಗುತ್ತಿರುವ ಅನಾಹುತಗಳು | ದೇಶದ ಪ್ರಗತಿಯಲ್ಲಿ ಯುವಶಕ್ತಿಯ ಪಾತ್ರ. |
| ಹಸಿರು ಪರಿಸರ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ. | ದೇಶದ ಪ್ರಗತಿಯಲ್ಲಿ ಯುವಶಕ್ತಿಯ ಪಾತ್ರ. | ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಮಹತ್ವ. |
| ನನ್ನ ಜೀವನದ ಗುರಿ | ವೃಕ್ಷ ಸಂಹಾರ ಹಾಗೂ ವೃದ್ಧರ ಅನಾದಾರ | |

### ಪತ್ರ ಲೇಖನ

**ಪಠ್ಯ ಪುಸ್ತಕದಲ್ಲಿಯ ಪುಟ ಸಂಖ್ಯೆ ೧೦೪ ರಿಂದ ೧೦೬ರ ವರೆಗೆ ವಿವರಣೆ ನೀಡಲಾಗಿದೆ.ಆ ಮಾದರಿ ಪತ್ರಗಳಂತೆ ಆಭ್ಯಾಸ ಮಾಡಿ**